ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 5 ಜನವರಿ 30, 1983 ಬೆಲೆ 60 ಪೈಸೆ

ಕರ್ನಾಟಕ ವಿಧಾನಸಭೆ: ಮೊದಲ ಅನುಭವಗಳು

—ಪಿ. ರಾಮಚಂದ್ರರಾವ್

ನಾನೊಬ್ಬ ಕೆಳಮಧ್ಯಮ ವರ್ಗದಿಂದ ಬಂದ ವ್ಯಕ್ತಿ. ಬಾಳಿನ ಉದ್ದಕ್ಕೂ ಕಳೆದ 35 ವರ್ಷಗಳಲ್ಲಿ ಬಡ ಜನರ ಮಧ್ಯೆ ಕೆಲಸ ಮಾಡುತ್ತಾ ಬಂದವನು. ಪ್ರೌಢಶಾಲೆಯ ಅಧ್ಯಾಪಕನಾಗಿದ್ದಾಗ ವಿಶೇಷವಾಗಿ ಬಡ ಶಿಕ್ಷಕರ ನಡುವೆ, ಆಮೇಲೆ 1961 ರಿಂದ ಕಾರ್ಮಿಕ ಮತ್ತು ರೈತ ಕೂಲಿಗಾರರನಡುವೆ, ಆರಂಭದಲ್ಲಿ ಸಂಯುಕ್ತ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತನಾಗಿ, 1964ರ ನಂತರ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡು ಬಂದಿರುವವನು.

ಈ ಜನವರಿ 24 ರಂದು ವಿಧಾನ ಸಭಾ ಸದಸ್ಯನಾಗಿ ರಾಜ್ಯ ವಿಧಾನಸಭೆ ಪ್ರವೇಶಿಸಿದೆ. ಪ್ರತಿಜ್ಞಾ ವಿಧಿ ಸ್ವೀಕರಿಸಿದೆ. ವಿಧಾನಸಭೆಯ ಸ್ಪೀಕರ್ ಚುನಾವಣೆಯಲ್ಲಿ ಭಾಗವಹಿಸಿದೆ. ಸಂಜೆ ರಾಜ್ಯಪಾಲರ ಭಾಷಣವನ್ನು ಆಲಿಸಿದೆ. ಮರುದಿನ 2–3 ಗಂಟೆಕಾಲ ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡೆ. ತಾ॥ 23 ರಿಂದ 37ರವರೆಗೆ ಶಾಸಕರ ಭವನದಲ್ಲಿ ವಾಸಮಾಡಿದೆ.

ಈ ನಾಲ್ಕೈದು ದಿನಗಳ ಹೊಸ ಅನುಭವವನ್ನು ಓದುಗರಲ್ಲಿ ಹಂಚಿಕೊಳ್ಳಬೇಕೆಂದು ಉತ್ಕಟ ಇಚ್ಛೆ ಆದುದರಿಂದ ಈ ಕೆಲವು ಸಾಲುಗಳನ್ನು ಬರೆಯುತ್ತಿದ್ದೇನೆ.

ಶಾಸಕರ ಅಂದರೆ ಎಂ. ಎಲ್. ಎ. ಸಾಹೇಬರುಗಳ ಜೀವನಕ್ಕೂ ರಾಜ್ಯದ ಸಾಮಾನ್ಯ ಜನರ ಜೀವನಕ್ಕೂ ಅರ್ಥಾತ್ ಏನೇನೂ ಸಾಮ್ಯತೆ ಇಲ್ಲವೆಂಬುದು ನನ್ನ ಮೊಟ್ಟಮೊದಲಿನ ಅನಿಸಿಕೆ. ಶಾಸಕರು ಜನತೆಯ ಅದರಲ್ಲೂ ಸಾಮಾನ್ಯ ಜನರ, ಅಂದರೆ ಶೇ. 60 ರಷ್ಟು ಬಡತನದ ರೇಖೆಗಿಂತ ಕೆಳಗಡೆ ಇರುವವರ ಮತಗಳನ್ನು ಪಡೆದು ಅವರ ಪ್ರತಿನಿಧಿಗಳಾಗಿ ಬಂದವರು ತಾನೆ ? ಈಗ ನಮ್ಮಲ್ಲಿರುವುದು ರಾಜಪ್ರಭುತ್ವದ ಬದಲು ಪ್ರಜಾಪ್ರಭುತ್ವ ತಾನೆ ? ಪ್ರಜಾಪ್ರಭುತ್ವದಲ್ಲಿನ ಪ್ರತಿನಿಧಿಗಳು ಪ್ರಜೆಗಳ ಏಳಿಗೆಯನ್ನು ನಿಜವಾಗಿ ಸಾಧಿಸಲು ಸಾಧ್ಯವಾಗಬೇಕಾದರೆ, ಅವರಂತೆ ಜೀವನ ಮಾಡುವವರಾಗಬೇಕು. ಅದು ಸಾಧ್ಯವಾಗದಿದ್ದರೆ ಜನಸಾಮಾನ್ಯರ ಜೀವನಕ್ಕೂ ಅವರ ಪ್ರತಿನಿಧಿಗಳ ಜೀವನಕ್ಕೂ ಬಹಳ ವ್ಯತ್ಯಾಸ ಇರಬಾರದು. ಈ ದೃಷ್ಟಿಯಲ್ಲಿ ನನಗಂತೂ ನಮ್ಮ ಎಂ. ಎಲ್. ಎ. ಸಾಹೇಬರುಗಳಿಗೆ ಒದಗಿಸುವ ಅನುಕೂಲತೆಗಳು ಅತಿ ಎಂದು ಕಾಣುತ್ತದೆ.

"ಸಂವಿಧಾನವನ್ನು ಸತ್ಯನಿಷ್ಠೆಯಿಂದ ಅನುಸರಿಸುತ್ತೇವೆ" ಎಂದೂ, "ರಾಷ್ಟ್ರದ ಸಮಗ್ರತೆಯನ್ನು ಎತ್ತಿ ಹಿಡಿಯುತ್ತೇವೆ" ಎಂದೂ ಶಾಸಕರು ಪ್ರತಿಜ್ಞೆಗೈದರು. ನನಗೆ ಬಹಳ ಸಂತೋಷವಾಯಿತು. ಛಿದ್ರಕಾರಿ ಶಕ್ತಿಗಳು ದೇಶದ ಕೆಲವು ಕಡೆ ಇಂದು ದೇಶದ ಸಮಗ್ರತೆಯನ್ನೇ ಬುಡಮೇಲು ಮಾಡಲು ಹವಣಿಸುತ್ತಿರುವಾಗ, ನಮ್ಮ ರಾಜ್ಯದಲ್ಲಿನ ಶಾಸಕರು ಸಮಗ್ರತೆಯನ್ನು ಎತ್ತಿಹಿಡಿಯಲು ಪ್ರತಿಜ್ಞೆಗೈದುದನ್ನು ಕಣ್ಣಾರೆ ಕಂಡು ನನಗೆ ಸಂತೋಷವಾಯಿತು. ಮನಸ್ಸು ಹಿಗ್ಗಿತು....ಆದರೆ ಈ ದೃಶ್ಯವನ್ನು ನೋಡುತ್ತಾ ನೋಡುತ್ತಾ ಇರುವಾಗಲೇ ಅಣ್ಣಾ ಡಿ.ಎಂ.ಕೆ. ಪಕ್ಷದ ಒಬ್ಬ ಶಾಸಕ ಸದಸ್ಯರು ತಮಿಳಿನಲ್ಲಿ ಪ್ರತಿಜ್ಞೆ ಸ್ವೀಕರಿಸುತ್ತಿರುವಾಗ ಆಡಳಿತ ಪಕ್ಷಕ್ಕೆ ಸೇರಿದ ಒಬ್ಬ ಸದಸ್ಯರು ಓಡಿ ಹೋಗಿ ಅವರ ಶಾಲನ್ನು ಎಳೆದುಕೊಂಡರು. ಧಿಕ್ಕಾರಗಳನ್ನು ಕೂಗಿದರು. ಇದೆಲ್ಲ ನನ್ನ ಕಣ್ಣೆದುರಿಗೇ ನಡೆಯಿತು.

ನನಗೆ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಇತರ ಗೆಳೆಯರಿಗೆ ಹಾಗೂ ಇನ್ನೂ ಹಲವರಿಗೆ ಈ ಘಟನೆಯಿಂದ ದಿಗ್ಭ್ರಾಂತಿಯಾಯಿತು. ನಾವೆಲ್ಲರೂ ಎದ್ದು ನಿಂತು ಬೊಬ್ಬೆ ಹಾಕಿದೆವು. ಕೆಲವರಂತೂ ಆ ದಿಕ್ಕಿಗೆ ಓಡಿದೆವು.

ಒಂದೆರಡು ನಿಮಿಷಗಳಲ್ಲಿ ಕೋಲಾಹಲವೇ ಉಂಟಾಯಿತು. ಸಭಾಧ್ಯಕ್ಷರು ಸಭೆಯನ್ನು ಮುಂದೂಡಿದರು...

ಇದೆಂತಾ ವರ್ತನೆ...ಅದೂ ಶಾಸಕರಿಂದ...ತಮ್ಮ ಮಾತೃಭಾಷೆಯಲ್ಲಿ ಒಬ್ಬ ಸದಸ್ಯ ಪ್ರತಿಜ್ಞೆ ಸ್ವೀಕರಿಸುತ್ತಿರುವಾಗ...

ಸಮಗ್ರತೆ...ರಾಷ್ಟ್ರದ ಸಮಗ್ರತೆಯನ್ನು ಎತ್ತಿಹಿಡಿಯುವುದರಲ್ಲಿ ನಾವು ಎಷ್ಟು ಹಿಂದೆ ಇದ್ದೇವೆ ಎಂದು ನನಗೆ ಅನಿಸಿತು. ಮುಖ್ಯಮಂತ್ರಿಗಳ ಮಾತನ್ನು ಕೇಳಿದಾಗ ಮಾತ್ರ ಸಮಾಧಾನವಾಯಿತು. "ಕನ್ನಡದ ಸಂಸ್ಕೃತಿಯು ಇತರ ಸಂಸ್ಕೃತಿಗಳನ್ನೂ, ಕನ್ನಡ ಭಾಷೆ ಇತರೆ ಸೋದರ ಭಾಷೆಗಳನ್ನು ತುಚ್ಛೀಕರಿಸುವಷ್ಟು ಕೀಳಾಗಿಲ್ಲ".

ತುರ್ತು ವಿಧೇಯಕದ ಚರ್ಚೆ ನಡೆಯಿತು. ಏಳು ತಿಂಗಳಿಂದ ನಡೆಯುವ ಒಂದು ಮುಷ್ಕರ ಪರಿಹಾರದ ಬಗ್ಗೆ ಕಿರುಬೆರಳಿನಷ್ಟು ನಷ್ಟ ಉಂಟುಮಾಡಿದವರಿಂದಲೇ ಆರ್ಭಟ... "ನಾವು ಅಧಿಕಾರದಿಂದ ಇಳಿದಾಕ್ಷಣ ಜಗತ್ತೇ ಬುಡುಮೇಲಾಗುತ್ತಿದೆ ಎಂಬ ಮನೋಭಾವದ ಪ್ರತ್ಯಕ್ಷ ದರ್ಶನ" ನನಗಾಯಿತು. ತಕ್ಷಣವೇ ನನಗೆ ಕೇರಳದ ಮಾಜಿ ಮುಖ್ಯಮಂತ್ರಿ ಇ.ಕೆ ನಾಯನಾರರು ಅಧಿಕಾರಕ್ಕೆ ಬಂದ ತಕ್ಷಣ ಮಂತ್ರಿ ಸ್ಟೀಫನರು ಹೇಳಿದ ಮಾತು ಜ್ಞಾಪಕಕ್ಕೆ ಬಂತು. "ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆ ಕುಸಿದಿದೆ''...ಶ್ರೀ ಗುಂಡೂರಾಯರ ಸರ್ಕಾರ ಅಧಿಕಾರ ಉರುಳಿ ಶ್ರೀ ರಾಮಕೃಷ್ಣ ಹೆಗಡೆ ಅವರ ಸರ್ಕಾರ ಅಧಿಕಾರ ಸ್ವೀಕಾರ ಮಾಡಿದ ತಕ್ಷಣ...ಕೆಲವೇ ದಿನಗಳಲ್ಲಿ ಎಲ್ಲವೂ ಬುಡಮೇಲಾಗಲು (ಬುಡ ಮೇಲಾಗಿ ಕಾಣಲು) ಕಾರಣವೇನು ? ...ನನ್ನ ಮನಸ್ಸಿನಲ್ಲಿ "ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಎಷ್ಟು ಕೆಳಮಟ್ಟದಲ್ಲಿ ಇದೆ ಎಂಬುದರ ತಿಳುವಳಿಕೆಯ ಅಲೆ ಉಂಟಾಯಿತು... ನಾವು ಅಧಿಕಾರದಲ್ಲಿ ಇದ್ದಾಗ ಎಲ್ಲವೂ 'ಸರಿ', ನಮ್ಮ ಕೈಯಿಂದ ಅಧಿಕಾರ ಹೋದಾಗ ಎಲ್ಲವೂ 'ಅನರ್ಥ' ಇದು ನಮ್ಮ ಪ್ರಜಾಪ್ರಭುತ್ವ."

ಇನ್ನೊಬ್ಬ ಶಾಸಕರು "ನಾನು ಹೋದ ಗ್ರಾಮಗಳಲೆಲ್ಲಾ ನೀರಿನ ಅಭಾವದಿಂದ ಜನ ತೀವ್ರ ಕಷ್ಟಪಡುತ್ತಿರುವುದು ಕಾಣುತ್ತಿದೆ ನಮ್ಮ ನೂರಾರು ಹಳ್ಳಿಗಳಲ್ಲಿ ನೀರೇ ಇಲ್ಲ" ಈ ದಾಟಿಯಲ್ಲಿ ಉದ್ಗಾರ ತೆಗೆದರು.

(8ನೇ ಪುಟನೋಡಿ)

ದೆಹಲಿ ಚುನಾವಣೆ-ಸೋಲಿನ ಹಾದಿಯಲ್ಲಿ ಕಾಂಗ್ರೆಸ್

ದೆಹಲಿ ಪುರಸಭೆ ಮತ್ತು ದೆಹಲಿ ನಗರ ಪಾಲಿಕೆಗಳಿಗೆ ಫೆಬ್ರವರಿ 5 ರಂದು ಚುನಾವಣೆ. ಕರ್ನಾಟಕ, ಆಂಧ್ರಗಳಲ್ಲಿ ಕಾಂಗ್ರೆಸ್ ಅನುಭವಿಸಿದ ಸೋಲಿನ ಸರಣಿಗೆ ಮತ್ತೊಂದು ಸೇರ್ಪಡೆ.

ದಕ್ಷಿಣದಲ್ಲಿ ಕಾಂಗ್ರೆಸ್‌ಗೆ ದೊರೆತ ಒಡೆತ ದೆಹಲಿ ಚುನಾವಣೆಯ ವಿರೋಧ ಪಕ್ಷಗಳ ಪ್ರಚಾರಕ್ಕೆ ಒಳ್ಳೆಯ ಸಾಧನವಾಗಿದೆ. ದೆಹಲಿ ಚುನಾವಣೆ ಹೆಚ್ಚು ಕಡಿಮೆ ವಿಧಾನಸಭಾ ಚುನಾವಣೆಯ ಸ್ವರೂಪವನ್ನೇ ಪಡೆದಿದೆ. 'ದಕ್ಷಿಣ್ ಮೆ ಇಂದಿರಾ ಹಾರಿ ಹೈ ! ಅಬ್ ದಿಲ್ಲಿ ಬಿ ಹಾರಿ ಹೈ !' (ದಕ್ಷಿಣದಲ್ಲಿ ಸೋತ ಇಂದಿರಾ ! ದೆಹಲಿಗೆ ಹಾರಿದರು !) ದೆಹಲಿಯ ಗೋಡೆಗಳ ಮೇಲೆ ರಾರಾಜಿಸುತ್ತಿರುವ ಭಿತ್ತಿ ಪತ್ರಗಳಲ್ಲಿನ ಮಿನುಗುವ ಪದಗಳಾಗಿವೆ.

ಪಕ್ಷದೊಳಗಿನ ಗುಂಪು ಜಗಳಗಳನ್ನು ಮರೆಸುವಂತಹ 'ದಕ್ಷಿಣದಲ್ಲಿ ನಾವು ಬೇರ್ಪಡೆಯಾಗಿದ್ದೆವು ಆದರೆ ಇಲ್ಲಿ ಸೇರ್ಪಡೆಯಾಗಿದ್ದೇವೆ' ಎಂಬಂತಹ ಪ್ರಚಾರವನ್ನು ಕಾಂಗ್ರೆಸ್ ನಡೆಸಿದೆ.

ಆದರೆ ವಾಸ್ತವವಾಗಿ ಕಾಂಗ್ರೆಸ್‌ನ ಒಳಗೆ ನಡೆಯುತ್ತಿರುವ ಗುಂಪು ಜಗಳದಿಂದಾಗಿ 70 ಮಂದಿ ಭಿನ್ನಮತೀಯರು ಸ್ಪರ್ಧಿಸುತ್ತಿರುವುದು ಒಂದು ದೊಡ್ಡ ವಿಪರ್ಯಾಸವೇ ಸರಿ.

ಕರ್ನಾಟಕ, ಆಂಧ್ರಗಳಲ್ಲಿ ಪಡೆದ ಸೋಲನ್ನು ಸರಿಪಡಿಸುವುದಕ್ಕಾಗಿ ಕಾಂಗ್ರೆಸ್ ಈ ಚುನಾವಣೆಯಲ್ಲಿ ಹೇಗಾದರೂ ಗೆಲ್ಲಲೇಬೇಕೆಂಬ ಉದ್ದೇಶದಿಂದಾಗಿ ತೀವ್ರ ಪ್ರಯತ್ನ ನಡೆಸುತ್ತಿದೆ. ಆದರೆ ಆದರ ಗುಂಪು ಜಗಳ ಇನ್ನೂ ಮುಗಿದಿಲ್ಲ. ಬದಲಾಗಿ ಅದು ಬೀದಿ ಜಗಳವಾಗುತ್ತಿದೆ. ಆರು ಮಂದಿ ಲೋಕಸಭಾ ಸದಸ್ಯರುಗಳನ್ನೊಳಗೊಂಡ ಸಮಿತಿಯೊಂದನ್ನು ಅಭ್ಯರ್ಥಿಗಳ ಆಯ್ಕೆಗಾಗಿ ನೇಮಕ ಮಾಡಲಾಯಿತು. ಈ ಸಮಿತಿಯು ತನಗೆ ಬೇಕಾದವರ ಹೆಸರುಗಳ ಪಟ್ಟಿಯನ್ನು ಸಿದ್ಧಪಡಿಸಿದೆ ಎಂದು ಆರೋಪಿಸಿ ದೆಹಲಿ ಪುರ ಸಭೆಯ 56 ಸ್ಥಾನಕ್ಕೆ 70 ಮಂದಿ ಕಾಂಗ್ರೆಸ್ ಸ್ಪರ್ಧಿಗಳು ಕಣಕ್ಕೆ ಇಳಿದಿದ್ದಾರೆ.

ಭಾರತೀಯ ಜನತಾ ಪಕ್ಷ ಚರಣ್‌ಸಿಂಗರ ಲೋಕದಳ ಪಕ್ಷದೊಂದಿಗೆ ಕೂಡಿಕೊಂಡು ಸಂಯುಕ್ತವಾಗಿ ಸ್ಪರ್ಧಿಸುತ್ತಿದೆ. ದೆಹಲಿ ಪುರಸಭೆಯ 50 ಸ್ಥಾನಗಳಿಗೂ, ದೆಹಲಿ ನಗರ ಪಾಲಿಕೆಯ 91 ಸ್ಥಾನಗಳಿಗೂ ಭಾರತೀಯ ಜನತಾ ಪಕ್ಷ ಸ್ಪರ್ಧಿಸಿದೆ. ಜನತಾ ಪಕ್ಷವು ಪುರಸಭೆಯ 37 ಸ್ಥಾನಗಳಿಗೂ ನಗರ ಪಾಲಿಕೆಯ 65 ಸ್ಥಾನಗಳಿಗೂ ಸ್ಪರ್ಧಿಸುತ್ತಿದೆ.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ಜಗಜೀವನರಾಮ್‌ರ ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ (ಎಸ್), ಲೋಕದಳ (ಕರ್ಪೂರಿ ಠಾಕೂರ್ ಬಣ) ಮತ್ತು ಬಹುಗುಣರವರ ಡೆಮಾಕ್ರಾಟಿಕ್ ಸೋಷಲಿಸ್ಟ್ ಪಕ್ಷಗಳು ಪ್ರಜಾಸತ್ತಾತ್ಮಕ ರಂಗ ರಚಿಸಿಕೊಂಡು ಸ್ಪರ್ಧಿಸುತ್ತಿವೆ.

1972ರ ಚುನಾವಣೆಯಲ್ಲಿ ಶೇಕಡಾ 48ರಷ್ಟು ಮತ ಪಡೆದಿದ್ದ ಇಂದಿರಾ ಕಾಂಗ್ರೆಸ್ 1977ರ ಚುನಾವಣೆಯಲ್ಲಿ ಗಳಿಸಿದ್ದು ಶೇಖಡಾ 36 ಮತಗಳು ಮಾತ್ರ ಎಂಬುದು ಗಮನೀಯ ಅಂಶ. ಆದ್ದರಿಂದ ಭಿನ್ನಮತೀಯ ಸ್ಪರ್ಧಿಗಳಿಂದಾಗಿಯೂ, ವಿರೋಧೀ ಅಲೆಯಿಂದಾಗಿಯೂ ಕಾಂಗ್ರೆಸ್ (ಐ)ನ ಸ್ಥಾನಗಳು ಗಣನೀಯವಾಗಿ ಕುಸಿಯುವುದೆಂದು ನಾವು ನಿರೀಕ್ಷಿಸಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ದೆಹಲಿ ಚುನಾವಣೆಯ ಫಲಿತಾಂಶ ಕಾಂಗ್ರೆಸ್ (ಐ)ಗೆ ಮತ್ತೊಂದು ದೊಡ್ಡ ಆಘಾತವುಂಟು ಮಾಡುವಂತಹುದಾಗಿರುತ್ತದೆಂದು ನಾವು ಆಶಿಸುತ್ತೇವೆ.

ಸಿ. ಐ. ಟಿ. ಯು. ಐದನೆಯ ಅಖಿಲ ಭಾರತ ಸಮ್ಮೇಳನ

ಕಾನ್ಪುರದಲ್ಲಿ — ಏಪ್ರಿಲ್ ೧೩ ರಿಂದ ೧೭ ರವರೆಗೆ

ಜನವರಿ 20 ರಂದು ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದ ಪ್ರಯಾಣ ಮಾಡುತ್ತಿದ್ದ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸದಸ್ಯರನ್ನು ಹೊತ್ತ ಕೋರ ಮಂಡಲ್ ಎಕ್ಸ್‌ಪ್ರೆಸ್ ರೈಲು ಒಂದು ಗಂಟೆ ತಡವಾಗಿ ಹೌರಾ ರೈಲ್ವೇ ನಿಲ್ದಾಣವನ್ನು ತಲುಪಿತು. ರೈಲಿನಿಂದ ಇಳಿಯುವ ವೇಳೆಗೆ ಸ್ವಾಗತ ಸಮಿತಿಯ ಸ್ವಯಂ ಸೇವಕರು ಸಿ.ಐ.ಟಿ.ಯು ಧ್ವಜಗಳನ್ನು ಹಿಡಿದು ಬರಮಾಡಿಕೊಂಡರು, ಅಲ್ಲಿಂದ ಸಭೆ ನಡೆಯುವ ಹಿಂದ್ ಮೋಟಾರ್ ಎಂಬ ಊರಿಗೆ ಹೌರಾ ನಿಲ್ದಾಣದಿಂದ ವಿದ್ಯುತ್ ಚಾಲಿತ ರೈಲಿನಲ್ಲಿ ಹೊರಡಬೇಕು. ರೈಲು ಹೊರಡುವುದು ಮ.ಧ್ಯಾಹ್ನ 1-50ಕ್ಕೆ ನಿಲ್ದಾಣದಲ್ಲಿ ನಾವು ಕಾದಿರುವಾಗಲೇ ನವದೆಹಲಿಯಿಂದ ಬಂದ ರೈಲೊಂದರಲ್ಲಿ ಸಿ.ಐ.ಟಿ.ಯು. ಮುಖಂಡರಾದ ಕಾಂ। ಇ. ಬಾಲಾನಂದನ್, ಕಾಂ। ಸುಶೀಲ್ ಭಟ್ಟಾಚಾರ್ಯ, ಕಾಂ। ವಿಮಲಾ ರಣದಿವೆ ಮೊದಲಾದವರು ಬಂದರು ಎಲ್ಲರೂ ಹಿಂದ್ ಮೋಟಾರ್ ತಲುಪುವಾಗ ಮಧ್ಯಾಹ್ನ 2-45 ಗಂಟೆ ಹಿಂದ್ ಮೋಟಾರ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರೂ, ಲೋಕಸಭಾ ಸದಸ್ಯರೂ ಆಗಿದ್ದ ದಿವಂಗತ ಕಾಂ। ದಿನೇಶ್ ಭಟ್ಟಾಚಾರ್ಯ ಅವರ ಸ್ಮರಣಾರ್ಥ ಕಟ್ಟಿರುವ 'ಕಾಂ. ದಿನೇಶ್ ಸ್ಮರಣ ಭವನ್' ಮತ್ತು ಕಾಂ। ದಿನೇಶ್ ಭಟ್ಟಾಚಾರ್ಯರ ಪ್ರತಿಮೆ ಈ ಎರಡರ ಉದ್ಘಾಟನೆ ಮತ್ತು ಅನಾವರಣ.

ಕಾಂ। ಬಿಜಯ್ ಮೋಧಕ್ ಎಂ.ಪಿ. ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರತಿಮೆಯ ಅನಾವರಣದ ನಂತರ ನೂರಾರು ಸಂಘ ಸಂಸ್ಥೆಗಳಿಂದ ಪ್ರತಿನಿಧಿಗಳಿಂದ ಮಾಲೆಗಳ ಅರ್ಪಣೆ ಕಾಂ। ದಿನೇಶ್ ಭಟ್ಟಾಚಾರ್ಯರ ಜನಪ್ರಿಯತೆಗೆ ದ್ಯೋತಕ. ಕಾಂ। ಇ.ಬಾಲಾನಂದನ್, ಕಾಂ। ಬಿ.ಟಿ.ರಣದಿವೆ, ಕಾಂ। ಸಮರ್ ಮುಖರ್ಜಿ ಮತ್ತು ಕಾಂ। ಶಾಂತಿ ಘಟಕ್, ಕಾಂ. ದಿನೇಶ್ ಭಟ್ಟಾಚಾರ್ಯರ ಬಗ್ಗೆ ಮಾತನಾಡಿ ಅವರ ಗುರಿಯನ್ನು ಸಾಧಿಸಲು ನಾವು ಅವರ ಜೀವನದಿಂದ ಸ್ಫೂರ್ತಿ ಪಡೆಯಬೇಕು ಮತ್ತು ದುಡಿಯಬೇಕು ಎಂದರು. ಮಾಲೆಗಳ ಅರ್ಪಣೆಗೆ ಸುಮಾರು ಒಂದು ಗಂಟೆ ಬೇಕಾಯ್ತು.

21ರ ಬೆಳಗ್ಗೆ ದಿನೇಶ್ ಸ್ಮರಣ ಭವನದ ಮುಂದಿನ ಬಯಲಿನಲ್ಲಿ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ.ಟಿ. ರಣದಿವೆ ಅವರಿಂದ ಸಿ. ಐ. ಟಿ. ಯು. ಧ್ವಜಾರೋಹಣ. ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯ ವ್ಯವಸ್ಥೆಯ ಹೊಣೆ ಹೊತ್ತಿದ್ದ ಹಿಂದೂಸ್ತಾನ್ ಮೋಟಾರ್ಸ್ ವರ್ಕರ್ಸ್ ಯೂನಿಯನ್‌ಗೆ 30 ವರ್ಷಗಳ ಪ್ರಾಯ. ಧ್ವಜಾರೋಹಣದ ಸಂಧರ್ಭದಲ್ಲಿ ಈ ಪ್ರಾಯದ ನೆನಪಿಗಾಗಿ ಸಿ.ಐ.ಟಿ.ಯು. ಮುಖಂಡರಿಂದ 30 ಪಾರಿವಾಳಗಳನ್ನು ಗಗನಕ್ಕೆ ಹಾರಿಬಿಡಲಾಯಿತು. ಹಿಂದೂಸ್ತಾನ್ ಮೋಟಾರ್ಸ್ ಕಂಪೆನಿ ನಮ್ಮ ದೇಶದ ಏಕಸ್ವಾಮ್ಯ ಬಂಡವಾಳಗಾರರಲ್ಲಿ ಮೊದಲ ಪಂಕ್ತಿಯಲ್ಲಿರುವ ಬಿರ್ಲಾ ಕುಟುಂಬದ್ದು. 15 ಸಾವಿರ ಕಾರ್ಮಿಕರು ಈ ಕಾರ್ಖಾನೆಯಲ್ಲಿ ಮೋಟಾರುಗಳನ್ನು, ಕಾರು, ಜೀಪುಗಳನ್ನು ತಯಾರಿಸುತ್ತಿದ್ದಾರೆ. ಈ ಕಾರ್ಮಿಕರಿಗೆ ಅನೇಕ ವರ್ಷಗಳ ಹೋರಾಟದ ಪರಂಪರೆಯಿದೆ. 'ವರ್ಗ ಸಹಕಾರ—ವರ್ಗ ಸಹೋದ್ಯಮ'ಗಳ ವಿರುದ್ಧ ಸತತವಾಗಿ ಹೋರಾಟ ನಡೆಸಿ ಈ ಧೋರಣೆಯನ್ನು ಅನುಸರಿಸುತ್ತಿದ್ದ ಸುಧಾರಣಾವಾದಿ ಮುಖಂಡರನ್ನು ಕಿತ್ತೊಗೆದು ವರ್ಗ ಹೋರಾಟದ ಹಾದಿಯಲ್ಲಿ ಮುನ್ನಡೆದ ಅನುಭವ ಈ ಕಾರ್ಮಿಕರಿಗಿದೆ.

ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆ ಬೆಳಗ್ಗೆ 10 ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಕಾಂ. ಬಿ. ಟಿ. ರಣದಿವೆ ಸಭಾಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ ಎಂ. ಪಿ , ಸಿ ಪಿ ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯರೂ, ಸಿ. ಪಿ. ಐ. (ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಕಾರ್ಯದರ್ಶಿ, ಪಶ್ಚಿಮ ಬಂಗಾಳದ ಎಡರಂಗ ಸಮಿತಿ ಅಧ್ಯಕ್ಷರಾಗಿದ್ದ ದಿವಂಗತ ಕಾಂ. ಪ್ರಮೋದ್ ದಾಸ್ ಗುಪ್ತರವರ ನೆನಪಿಗೆ ಶ್ರದ್ಧಾಂಜಲಿಯರ್ಪಿಸುವ ನಿರ್ಣಯವೊಂದನ್ನು ಮಂಡಿಸಿದರು. ಇಡೀ ಸಭೆಯು ಎದ್ದು ನಿಂತು ಮೌನವನ್ನು ಆಚರಿಸಿತು. ನಿರ್ಣಯವನ್ನು ಸ್ವೀಕರಿಸಿತು. ಮತ್ತೆ ಕಾಂ. ಪಿ ರಾಮಮೂರ್ತಿ ಅವರು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಸೋವಿಯತ್ ಒಕ್ಕೂಟದ ಅಧ್ಯಕ್ಷ ದಿವಂಗತ ಕಾಂ. ಲಿಯೋನಿಡ್ ಬ್ರೆಜ್ನೇವ್ ಅವರಿಗೆ ಶ್ರದ್ಧಾಂಜಲಿಯರ್ಪಿಸುವ ನಿರ್ಣಯವನ್ನು ಮಂಡಿಸಿದರು. ನಿರ್ಣಯದ ಅಂಗೀಕಾರವಾಯಿತು.

ಕಳೆದ ಸಭೆಯ ನಂತರ ಈ ಸಭೆಯವರೆಗಿನ ಅವಧಿಯಲ್ಲಿ ಕಾರ್ಮಿಕ ಹೋರಾಟಗಳಲ್ಲಿ ಜನತೆಯ ಆಂದೋಲನಗಳಲ್ಲಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಗೊತ್ತುವಳಿಯನ್ನು ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ನೃಪಸಿಂಗ ಚಕ್ರವರ್ತಿ ಅವರು ಮಂಡಿಸಿದರು. ಈ ಗೊತ್ತುವಳಿಯಲ್ಲಿ ಧ ಜ ಯಾ ಬಾ ದ್ ನ ಲ್ಲಿ ಎ.ಐ.ಟಿ.ಯು.ಸಿ. ಗೂಂಡಾಗಳಿಂದ ಕೊಲೆಯಾದ ಕಾಂ. ಕಿಶನ್ ಪಾಲ್, ಆಡಳಿತ ಮಂಡಳಿಯ ಗೂಂಡಾಗಳಿಂದ ಜೀವಂತ ಸುಡಲ್ಪಟ್ಟ ಬಿಹಾರದ ಕಾಂ. ಸುರೇಂದ್ರ ಶರ್ಮ ಮತ್ತು ಕರ್ನಾಟಕದಲ್ಲಿ ಕೆ.ಜಿ.ಎಫ್.ನ ಬಿ.ಇ.ಎಂ.ಎಲ್. ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯಕಾರೀ ಸಮಿತಿ ಸದಸ್ಯ ಆರ್. ಪಿ. ಐ. ಗವಾಯಿ ಗುಂಪಿನ ಗೂಂಡಾಗಳಿಂದ ಕೊಲೆಗೀಡಾದ ಕಾಂ. ಎಂ. ಆರೋಗ್ಯದಾಸ್ ಇವರ ಹೆಸರುಗಳು ನಿರ್ಣಯದಲ್ಲಿ ವಿಶೇಷವಾಗಿ ನಮೂದಿಸಲ್ಪಟ್ಟಿತು.

ಕಾಂ. ನೃಪಸಿಂಗ ಚಕ್ರವರ್ತಿ ಅವರು ಕಳೆದ ಕಾರ್ಯಕಾರೀ ಸಮಿತಿ ಸಭೆಯ ನಂತರ ಈವರೆಗಿನ ಅವಧಿಯಲ್ಲಿ ನಿಧನರಾದ ಮುಖಂಡರು ಮತ್ತು ಕಾರ್ಮಿಕರಿಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಂಡಿಸಿದರು.

1975 ರಿಂದ 79ರವರೆಗೆ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸದಸ್ಯರಾಗಿದ್ದ, 1970 ರಿಂದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಸದಸ್ಯರಾಗಿದ್ದ, 1962 ರಿಂದ 67ರವರೆಗೆ ಗುಲ್ಬರ್ಗಾ ಕ್ಷೇತ್ರವನ್ನು ಪ್ರತಿನಿಧಿಸಿ ಕರ್ನಾಟಕ ವಿಧಾನ ಸಭಾ ಸದಸ್ಯರಾಗಿದ್ದ, ಗುಲ್ಬರ್ಗಾ ಎಂ. ಎಸ್. ಕೆ. ವರ್ಕರ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ. ಗಂಗಾಧರ ನಮೋಶಿ ಅವರ ನಿಧನದ ಬಗ್ಗೆ ಕಾಂ. ನೃಪಸಿಂಗ ಚಕ್ರವರ್ತಿ ಅವರು ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಬಿಜಯ್ ಮೋಧಕ್, ಎಂ. ಪಿ. ತಮ್ಮ ಸ್ವಾಗತ ಭಾಷಣದಲ್ಲಿ ಸ್ವಾತಂತ್ರ ಚಳುವಳಿಯಲ್ಲಿ ಹಾಗೂ ಶ್ರಮಿಕ ಆಂದೋಳನದಲ್ಲಿ ಹೂಗ್ಲಿ ಜಿಲ್ಲೆಯ ಕಾರ್ಮಿಕರ ಪಾತ್ರ ಅದರಲ್ಲೂ ಹಿಂದೂಸ್ತಾನ್ ಮೋಟಾರ್ಸ್ ಕಾರ್ಮಿಕರ ಪಾತ್ರವನ್ನು ಪ್ರಸ್ತಾಪಿಸಿದರು.

ಅಧ್ಯಕ್ಷ ಕಾಂ. ಬಿ. ಟಿ. ರಣದಿವೆ ಅವರು ಪ್ರಾರಂಭದಲ್ಲಿ ಕಾಂ. ಬಿಜಯ್ ಮೋಧಕ್ ಅವರ ಭಾಷಣದ ಬಗ್ಗೆ ಪ್ರಸ್ತಾಪಿಸಿದರು. ಅವರು ತಮ್ಮ ಭಾಷಣದಲ್ಲಿ ಕಾರ್ಮಿಕ ವರ್ಗದ ಮೇಲೆ ನಡೆಯುತ್ತಿರುವ ಧಾಳಿಯ ಕುರಿತಾಗಿ, ಜಾಗತಿಕ ಬಂಡವಾಳಶಾಹೀ ಜಗತ್ತು ಎದುರಿಸುತ್ತಿರುವ ಬಿಕ್ಕಟ್ಟಿನ ಕುರಿತಾಗಿ, ಇತ್ತೀಚೆಗೆ ನಡೆದ ಚುನಾವಣಾ ಫಲಿತಾಂಶದ ರಾಜಕೀಯ ಮಹತ್ವದ ಕುರಿತಾಗಿ ಮಾತನಾಡಿದರು.

ಸಿ.ಐ.ಟಿ.ಯು. ಐದನೆಯ ಅಖಿಲ ಭಾರತ ಸಮ್ಮೇಳನವನ್ನು 1983 ಏಪ್ರಿಲ್ 13 ರಿಂದ 17ರವರೆಗೆ ಉತ್ತರ ಪ್ರದೇಶದಲ್ಲಿರುವ ಕಾನ್ಪುರದಲ್ಲಿ ನಡೆಸಲು ಸಭೆಯು ತೀರ್ಮಾನಿಸಿತು. ಈ ಸಮ್ಮೇಳನದಲ್ಲಿ ಎಲ್ಲಾ ರಾಜ್ಯಗಳಿಂದಲೂ 500 ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಈ ಈ ಸಮ್ಮೇಳನಕ್ಕೆ ಸಮಾಜವಾದೀ ದೇಶಗಳಿಂದ ಹಾಗೂ ಇತರ ಅನೇಕ ದೇಶಗಳಿಂದ ಸೌಹಾರ್ದ ಪ್ರತಿನಿಧಿಗಳ ತಂಡಗಳು ಬರುವ ನಿರೀಕ್ಷೆಯಿದೆ.

ರಾಜಾಸ್ಥಾನದ ಸಿ. ಐ. ಟಿ. ಯು. ಘಟಕದ ಮೇಲೆ ಸಿ. ಐ. ಟಿ. ಯು. ಕಾರ್ಯಕಾರೀ ಸಮಿತಿ ಹಾಗೂ ಸಿ.ಐ.ಟಿ.ಯು. ಕೇಂದ್ರ ಸೆಕ್ರೆಟೇರಿಯೆಟ್ ತೆಗೆದುಕೊಂಡ ಕ್ರಮಗಳನ್ನು ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ದೃಢೀಕರಿಸಿತು.

'ಯುದ್ಧದ ಅಪಾಯ ಮತ್ತು ಶಾಂತಿಗಾಗಿ ಹೋರಾಟ', 'ಸೋವಿಯೆತ್ ಒಕ್ಕೂಟದ ಅರವತ್ತನೆಯ ವಾರ್ಷಿಕೋತ್ಸವ', 'ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ದೇಶಗಳ ಕಾರ್ಮಿಕ ವರ್ಗದ ಹೋರಾಟಗಳನ್ನು ಕುರಿತು', 'ದೇಶದಲ್ಲಿನ ಬರಗಾಲ ಪರಿಸ್ಥಿತಿ ಕುರಿತು', 'ಆನಂದ ಬಜಾರ್ ಗುಂಪಿನ ಪತ್ರಿಕೆಗಳ ಮುದ್ರಣ ಕಾರ್ಮಿಕರ ಹೋರಾಟ', 'ದೆಹಲಿಯ ವಿಶ್ವವಿದ್ಯಾನಿಲಯದ ಶಿಕ್ಷಕರ ಹೋರಾಟ', 'ಬಿಹಾರ, ಒರಿಸ್ಸಾ, ತಮಿಳುನಾಡುಗಳ ಸರ್ಕಾರಗಳು ಮಾಡಿರುವ ಪತ್ರಿಕಾ ಪ್ರತಿಬಂಧಕ ಕಾನೂನುಗಳನ್ನು ಕುರಿತು' 'ಕೇರಳದ ಕೈಗಾರಿಕೆಗಳ ದುಸ್ಥಿತಿಯ ಬಗ್ಗೆ', 'ಉತ್ತರ ಬಂಗಾಳದಲ್ಲಿ ಟೀ ತೋಟಗಳ ಕಾರ್ಮಿಕರಿಗೆ ಈವರೆಗೆ ನೀಡುತ್ತಿದ್ದ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳಲು ಮಾಲೀಕರು ಮಾಡುತ್ತಿರುವ ಸಂಚಿನ ಬಗ್ಗೆ' ಮತ್ತು ಇತರ ಹಲವು ಮುಖ್ಯ ಪ್ರಶ್ನೆಗಳ ಬಗ್ಗೆ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆ ನಿರ್ಣಯಗಳನ್ನು ಅಂಗೀಕರಿಸಿತು.

23ರ ಸಂಜೆ ಬಹಿರಂಗ ಸಭೆ ನಡೆಯಿತು. ಕಾಂ. ಬಿಜಯ್ ಮೋಧಕ್ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ಇ. ಬಾಲಾನಂದನ್ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ, ಅಧ್ಯಕ್ಷರಾದ ಕಾಂ. ಬಿ.ಟಿ. ರಣದಿವೆ ಮತ್ತು ಖಜಾಂಚಿ ಕಾಂ. ಸಮರ್ ಮುಖರ್ಜಿ ಬಹಿರಂಗ ಸಭೆಯಲ್ಲಿ ಭಾಷಣಗಳನ್ನು ಮಾಡಿ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯ ಕಾರ್ಯಕಲಾಪಗಳನ್ನು ತೀರ್ಮಾನಗಳನ್ನು ವಿವರಿಸಿದರು.

[ಈ ವರದಿಯನ್ನು ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ನೀಡಿರುತ್ತಾರೆ.]

o

ನಗರಾಸ್ತಿ ಮಿತಿ ಕಾನೂನು ತಿದ್ದುಪಡಿ ಮಾಡಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಒತ್ತಾಯ

ನಗರಾಸ್ತಿಮಿತಿ ಕಾನೂನಿನಲ್ಲಿ ನೂರಾರು ಎಕ್ರೆ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯೆಂದು ಪರಿಗಣಿದುದರಿಂದಾಗಿ ಮಂಗಳೂರು ನಗರದ ಆಸುಪಾಸಿನಲ್ಲಿರುವ ರೈತರಿಗೆ ತುಂಬಾ ತೊಂದರೆಯಾಗಿದೆ. ದೊಡ್ಡ ಪ್ರಮಾಣದಲ್ಲಿ ಭೂಮಿ ಇರುವ ಭೂ ಮಾಲಿಕರು ಡಿಕ್ಲರೇಶನ್ ಕೊಡಲಿಲ್ಲ. ಕಾನೂನಿಗೆ ವಿಧೇಯರಾಗಿ ಡಿಕ್ಲರೇಶನ್ ಸಲ್ಲಿಸಿದ ಅನೇಕ ಸಣ್ಣ ರೈತರು ಮತ್ತು ಇತರ ಬಡ ಕುಟುಂಬಗಳಿಂದ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಲು ಸರಕಾರವು ಕ್ರಮಕೈಗೊಳ್ಳುತ್ತಿದ್ದು, ಇದರಿಂದಾಗಿ ಗಂಭೀರ ಪಕ್ಷಪಾತವೂ ಬಡ ರೈತರಿಗೆ ಅನ್ಯಾಯವು ಆಗುತ್ತಿದೆ. ತಾ॥ 20-1-83 ರಂದು ಸಭೆ ಸೇರಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯು, ಬಡ ರೈತರಿಗಾಗಿರುವ ತೊಂದರೆಗಳನ್ನು ನಿವಾರಿಸಲು ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ತರುವಂತೆಯೂ, ಆ ತನಕ ಕಾನೂನಿನ ಜ್ಯಾರಿಯನ್ನು ತಡೆ ಹಿಡಿಯುವಂತೆಯೂ ರಾಜ್ಯ ಸರಕಾರವನ್ನು ಒತ್ತಾಯಿಸಲು ತೀರ್ಮಾನಿಸಿದೆ.

ಭೂ ಚಿದ್ರೀಕರಣ (fragmentation) ತಡೆ ಕಾನೂನು ಮತ್ತು ಕನ್ವರ್ಶನ್ ಕಾನೂನುಗಳಿಂದಲೂ ಜನರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಈ ಕಾನೂನುಗಳಿಗೂ ಸೂಕ್ತ ತಿದ್ದುಪಡಿಗಳನ್ನು ತರುವಂತೆ ಸರಕಾರವನ್ನು ಒತ್ತಾಯಿಸಲೂ ಸಭೆಯು ನಿರ್ಣಯಿಸಿತು.

ಮನೆ ಇಲ್ಲದವರಿಗೆ 5 ಸೆಂಟ್ಸ್‌ನಂತೆ ಕೊಟ್ಟ ಮನೆ ನಿವೇಶನಗಳಿಗೆ ಕೂಡಲೇ ಪಟ್ಟಾಕೊಡುವಂತೆ ಸರಕಾರವನ್ನು ಒತ್ತಾಯಿಸಲಾಯಿತ.

(8ನೇ ಪುಟ ನೋಡಿ)

ಅಂತರರಾಷ್ಟ್ರೀಯ :

ನಿಕರಾಗುವಾ—ಪ್ರತಿಕ್ರಾಂತಿ ನಡೆಸುವ ಸಾಮ್ರಾಜ್ಯಶಾಹಿ ಪಿತೂರಿ

1979ರ ಜುಲೈ 19 ರಂದು ನಿಕರಾಗುವ ದೇಶದ ಜನತೆ ದೇಶವನ್ನು ತೀರಾ ಬರ್ಬರವಾಗಿ ಆಳುತ್ತಿದ್ದ ಸಾಮ್ರಾಜ್ಯಶಾಹಿ ಅಮೇರಿಕದ ಕೃಪಾಪೋಷಿತ ಸರ್ವಾಧಿಕಾರಿ ಸರಕಾರವನ್ನು ಕಿತ್ತೊಗೆಯುವ ಮೂಲಕ ಕ್ರಾಂತಿಯನ್ನು ಯಶಸ್ವಿಗೊಳಿಸಿದ್ದರು. ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿ, ಧೀಮಂತ ಹೋರಾಟದಿಂದ ಸಾಮ್ರಾಜ್ಯಶಾಹಿಗಳನ್ನು ಮಣ್ಣು ಮುಕ್ಕಿಸಿದ ಇಲ್ಲಿನ ಜನತೆ ಇಂದಿಗೂ ದೇಶವನ್ನು ಮುನ್ನಡೆಸುವಲ್ಲಿ ಅಮೇರಿಕಾದಿಂದ ನಾನಾ ರೀತಿಯ ಬೆದರಿಕೆ ಮತ್ತು ಅಡಚಣೆಗಳನ್ನು ಎದುರಿಸುತ್ತಿದ್ದಾರೆ.

ನಿಕರಾಗುವಾದಲ್ಲಿ ನಡೆದ ಯಶಸ್ವಿ ಕ್ರಾಂತಿಯಿಂದ ಸಮಾಜವಾದಿ ರಾಷ್ಟ್ರಗಳ ಶಕ್ತಿ ವೃದ್ಧಿಸಿತು. ಸಾಮ್ರಾಜ್ಯಶಾಹಿ ಶಕ್ತಿಗೆ ತೀವ್ರ ಹೊಡೆತ ಅನುಭವಿಸಬೇಕಾಗಿ ಬಂದಿತ್ತಾದರೂ ಇಂದಿಗೂ ಅಮೇರಿಕ ಇದನ್ನು ಅಂಗೀಕರಿಸಲು ಸಿದ್ಧವಿಲ್ಲ. ಪರೋಕ್ಷವಾಗಿ, ನಿಕರಾಗುವಾದಲ್ಲಿ ನಡೆದ ಜನತಾ ಕ್ರಾಂತಿಯನ್ನು ವಿಫಲಗೊಳಿಸಿ ಪ್ರತಿಕ್ರಾಂತಿ ಸಂಘಟಿಸಲು ನಾನಾ ಕುತಂತ್ರಗಳನ್ನು ಅನುಸರಿಸುತ್ತಿದೆ. ದೇಶದೊಳಗೆ ಅಸ್ಥಿರತೆ ಹಾಗು ಪ್ರಕ್ಷೋಭೆ ಬೆಳೆಸಲು ಅಮೇರಿಕಾದ ಕುಖ್ಯಾತ ಗುಪ್ತಚಾರಕ ದಳ ಸಿ.ಐ.ಎ. ಯೋಜಿತ ಕಾರ್ಯಕ್ರಮಗಳನ್ನು ನಡೆಸುತ್ತಲಿದೆ. ದೇಶದೊಳಗಿನ ಸ್ಥಾಪಿತ ಹಿತಾಶಕ್ತಿಗಳೊಂದಿಗೆ ಶಾಮೀಲಾಗಿ ಕ್ರಾಂತಿಕಾರಿ ಸರಕಾರದ ವಿರುದ್ಧ ಅಲ್ಲಲ್ಲಿ ಗಲಭೆಗಳನ್ನು ಸಂಘಟಿಸಲಾಗುತ್ತಿದೆ. ಸಾಮ್ರಾಜ್ಯಶಾಹಿಗಳಿಂದ ಶಸ್ತ್ರ ಮತ್ತು ಆರ್ಥಿಕ ನೆರವು ಪಡೆಯುತ್ತಿರುವ ಪ್ರತಿಗಾಮಿ ಶಕ್ತಿಗಳು ಜನರ ಧಾರ್ಮಿಕ ಮನೋಭಾವವನ್ನು ಕೆದಕಿ "ಈಗಿನ ಸರಕಾರ ದೈವ ವಿರೋಧಿ" ಎಂದು ಅಪಪ್ರಚಾರ ಮಾಡಿ ಜನ ದೊಂಬಿ ಏಳುವಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಕ್ರಾಂತಿ ವಿರೋಧಿ ಶಕ್ತಿಗಳು ಸಿ.ಐ.ಎ. ವ್ಯಕ್ತಿಗಳೊಂದಿಗೆ ಶಾಮೀಲಾಗಿ ಸರಕಾರದ ಪ್ರತಿಯೊಂದು ಪ್ರಗತಿಪರ ಕಾರ್ಯಕ್ರಮಗಳನ್ನು ವಿರೋಧಿಸುತ್ತಿವೆ. ಜನರ ಧಾರ್ಮಿಕ ನಂಬಿಕೆಗಳನ್ನು ಕೆದಕಿ ಪರಸ್ಪರ ಗುಂಪು ಘರ್ಷಣೆಗಳನ್ನು ಹುಟ್ಟಿಸಿ ಅಶಾಂತಿ ವಾತಾವರಣ ಸೃಷ್ಟಿಸಲಾಗುತ್ತಿದೆ. ಇದಕ್ಕೆ ಉದಾಹರಣೆಯಾಗಿ ಒಂದು ಘಟನೆಯನ್ನು ಹೇಳುವುದಿದ್ದರೆ, ಕಳೆದ ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಈ ದುಷ್ಟ ಶಕ್ತಿಗಳು ಕೆಥೋಲಿಕ್ ವಿದ್ಯಾರ್ಥಿಗಳ ನಡುವೆ ಹಾಗು ಮುಸಯಾದ ಕೆಲವು ಜನವಿಭಾಗದ ನಡುವೆ ಪರಸ್ಪರ ತಿಕ್ಕಾಟ ಹುಟ್ಟಿಸಿತು. ಕೆಥೋಲಿಕ್ ಕಾಲೇಜಿನ ಮೇಲೆ ಧಾಳಿ ನಡೆಸಲಾಯಿತು. ಶಾಂತಿಯುತವಾಗಿ ಪ್ರದರ್ಶನ ನಡೆಸುತ್ತಿದ್ದ ಜನರ ಮೇಲೆ ಗುಂಡು ಹಾರಿಸಿ ಮೂವರನ್ನು ಕೊಲ್ಲಲಾಯಿತು. ಈ ರೀತಿಯ ಪ್ರಕ್ಷೋಭೆಗಳನ್ನು ಆಂತರಿಕವಾಗಿ ಹುಟ್ಟಿಸುವುದು ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿಗಳು ಅನುಸರಿಸುತ್ತಿರುವ ಹೊಸ ತಂತ್ರಗಾರಿಕೆ. (ಉದಾ: ಭಾರತದ ಅಸ್ಸಾಂ, ಪಂಜಾಬ್ ಮೊದಲಾದೆಡೆಗಳಲ್ಲಿ) ಜನರಲ್ಲಿ ಭಯದ ವಾತವರಣ ಉಂಟು ಮಾಡಿ ಅನಂತರ ಹೊರಗಿನಿಂದ ದಾಳಿ ನಡೆಸುವ ದೊಡ್ಡ ಯೋಜನೆಯನ್ನು ಸಿ.ಐ ಎ. ರೂಪಿಸುತ್ತಿದೆ.

1982ರ ಮೊದಲ 8 ತಿಂಗಳಲ್ಲಿ ನಿಕರಾಗುವಾದೊಳಗೆ ಅತಿಕ್ರಮಿಸುವ 38 ಪ್ರಯತ್ನಗಳನ್ನು ಅಮೇರಿಕಾ ಬೆಂಬಲಿತ ಸೈನ್ಯ ದಳಗಳು ನಡೆಸಿವೆ. ಕಳೆದ ಜುಲೈ 24ರಲ್ಲಿ ಈ ದಾಳಿಯಲ್ಲಿ 14 ನಿಶಸ್ತ್ರಧಾರಿ ರೈತರು ಕೊಲ್ಲಲ್ಪಟ್ಟರು. ಕ್ರಾಂತಿಯ ಸಮಯದಲ್ಲಿ ನಿಕರಾಗುವಾದಿಂದ ಪಲಾಯನ ಗೈದು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಆಶ್ರಯ ಪಡೆದ ವ್ಯಾಪಾರಿ ಫ್ರಾನ್ಸಿಸ್ ಕಾರ್ಡಿನಲ್ "ವಾಶಿಂಗ್‌ಟನ್ ಪೋಸ್ಟ್" ಪತ್ರಿಕೆಯಲ್ಲಿ ಸಂದರ್ಶನ ನೀಡಿ ಕ್ರಾಂತಿಯಲ್ಲಿ ಜಯಶೀಲರಾಗಿ ಮುನ್ನಡೆಯುತ್ತಿರುವ ನಿಕರಾಗುವಾದ ಜನತೆಯ ಮೇಲೆ "ಧರ್ಮಯುದ್ಧ" ಸಾರಲು ತಾನು ನೇತೃತ್ವ ನೀಡುವುದಾಗಿ ಹೇಳಿರುತ್ತಾನೆ. ಸಿ ಐ ಎ. ನೇತೃತ್ವದಲ್ಲಿ ಅಮೇರಿಕವು ನಿಕರಾಗ್ವ ವಿರುದ್ಧ ಸೈನ್ಯ ತರಬೇತಿ ನಡೆಸುತ್ತಿದೆ. ದೇಶ ತೊರೆದಿರುವ ತೀರಾ ಬಲಪಂಥಿಯ "ನಿಕರಾಗುವಾದ ಪ್ರಜಾಪ್ರಭುತ್ವ ಚಳುವಳಿ" ಎಂದು ಕರೆಸಿಕೊಳ್ಳುತ್ತಿರುವ ಪಕ್ಷವು ಕ್ರಾಂತಿಯ ನಂತರ ನಿಕರಾಗ್ವದಲ್ಲಿ ಸ್ಥಾಪಿಸಲ್ಪಟ್ಟ ಹೊಸ ಸಮಾಜವಾದಿ ವ್ಯವಸ್ಥೆಯನ್ನು ಧಿಕ್ಕರಿಸಿ ಪ್ರತಿಗಾಮಿಗಳೊಂದಿಗೆ ಶಾಮೀಲಾಗಿದೆ. ಸಿ ಐ.ಎ. ಇವರೊಂದಿಗೆ ಸಂಪರ್ಕ ಇರಿಸಿಕೊಂಡಿದೆ. ನಿಕರಾಗುವ ವಿರುದ್ಧದ ಕಾರಸ್ಥಾನದಲ್ಲಿ ಅಮೇರಿಕಾದ ಮುಖ್ಯ ಕೇಂದ್ರವಾದ ಹೊಂಡುರಾಸ್‌ನಲ್ಲಿ ಇತ್ತೀಚಿನ ದಿನಗಳ ಸೈನ್ಯ ಚಟುವಟಿಕೆ ಬಿರುಸಾಗುತ್ತಿದೆ. 14 ಮಿಲಿಯ ಡಾಲರ್ ಮೌಲ್ಯದ ಶಸ್ತ್ರರಾಶಿ ಮಾಡಲ್ಪಟ್ಟಿದೆ. 3 ವಿಮಾನ ನಿಲ್ದಾಣಗಳನ್ನು ವಿಶೇಷವಾಗಿ ಸಿದ್ಧಗೊಳಿಸಲಾಗಿದೆ. ನಿಕರಾಗ್ವ ಗಡಿಗೆ ತಾಗಿ 3,000 ಸೈನ್ಯ ದಳವನ್ನು ನೆಲೆಗೊಳಿಸಲಾಗಿದೆ. ನಿಕರಾಗ್ವದಲ್ಲಿ ಪ್ರತಿಕ್ರಾಂತಿ ನಡೆಸುವ ಸ್ಪಷ್ಟ ಉದ್ದೇಶದಿಂದ ಅಮೇರಿಕ ಈ ಎಲ್ಲಾ ತಯಾರಿ ನಡೆಸುತ್ತಿರುವುದು ಸ್ಪಷ್ಟವಾಗಿದೆ.

ರೇಗನ್ ಸರಕಾರದ ಈ 'ಮಹದಾಸೆ' ಈಡೇರಲು ನಿಕರಾಗುವದ ದೇಶಪ್ರೇಮಿ ಜನತೆ, ಹಾಗು ಸಮಾಜವಾದಿ ಜಗತ್ತು ಖಂಡಿತ ಬಿಡಲಾರದು. ಯಾವುದೇ ದಾಳಿಯನ್ನಾದರೂ ಎದುರಿಸಿ ಕ್ರಾಂತಿಯ ಫಲವನ್ನು ಉಳಿಸಿಕೊಳ್ಳಲು ನಿಕರಾಗ್ವ ಜನತೆ ನಿರ್ಧರಿಸಿದೆ. ನಿಕರಾಗುವಾದ ಸುತ್ತಮುತ್ತ ಜಮಾಯಿಸಲ್ಪಟ್ಟಿರುವ ಸಾಮ್ರಾಜ್ಯಶಾಹಿ ಸೈನ್ಯದ ವಾಪಸಾತಿಗೆ ಹಾಗು ಸಮಾಜವಾದಿ ವ್ಯವಸ್ಥೆಯ ರಕ್ಷಣೆಗೆ ಪ್ರತಿಯೊಬ್ಬ ಮಾನವ ಪ್ರೇಮಿಯೂ ಇಂದು ಒತ್ತಾಯ ಹೇರಬೇಕಾಗಿದೆ.

—ಕುಮಾರ್ ಕುಂದಾಪುರ

○

ರೊಮೇನಿಯಾ ಗಣರಾಜ್ಯದ ೩೫ನೇ ವಾರ್ಷಿಕೋತ್ಸವ

ಕಳೆದ ಡಿಸೆಂಬರ್ 30 ರಂದು ರೊಮೇನಿಯಾ ಜನತಾ ಗಣರಾಜ್ಯವು ಅತ್ಯುತ್ಸಾಹದಿಂದ ತನ್ನ 35ನೇ ವಾರ್ಷಿಕೋತ್ಸವವನ್ನು ಆಚರಿಸಿತು.

1947ರಲ್ಲಿ ರೊಮೇನಿಯಾದ ರಾಜನಾಗಿದ್ದ ಮೊದಲನೆಯ ಮೈಕಲ್ ತಾನು ಸೇರಿದಂತೆ ತನ್ನೆಲ್ಲಾ ಪೀಳಿಗೆಯವರನ್ನು ಸಿಂಹಾಸನದಿಂದ ಕೆಳಗಿಳಿಸಲು ಮಾಡಿದ ನಿರ್ಧಾರ ಮಹತ್ವದ್ದಾಗಿ ಪರಿಣಮಿಸಿತು. "....ರಾಜಮನೆತನದ ಆಳ್ವಿಕೆ ದೇಶದ ಪ್ರಸ್ತುತ ಸ್ಥಿತಿಗಳಿಗೆ ಹೊಂದಿಕೊಳ್ಳದ ಕಾರಣ ಹಾಗು ದೇಶದ ಬೆಳವಣಿಗೆಗೆ ತುಂಬಾ ತೊಡಕಾಗಿರುವ ಕಾರಣದಿಂದಾಗಿ ದೇಶದ ಸ್ಥಿತಿಗತಿಗಳನ್ನು ಅರಿತು ಹಾಗು ತನ್ನ ಜವಾಬ್ದಾರಿಯನ್ನು ಅರಿತು ತಾನು ಕೆಳಗಿಳಿಯುವುದಾಗಿ..." ರಾಜ ಘೋಷಿಸುವ ಮೂಲಕ 18೦6ರಲ್ಲಿ ಸ್ಥಾಪಿಸಲ್ಪಟ್ಟ ರಾಜಪ್ರಭುತ್ವ ಕೊನೆಗೊಂಡಿತು.

1944ರ ಆಗಸ್ಟ್ 24ರ ರೊಮೇನಿಯಾ ದೇಶದ ವಿಮೋಚನೆಯ ಚಾರಿತ್ರಿಕ ಘಟನೆಯಲ್ಲಿ ಅರಸ ಮೈಕೆಲ್‌ಗೆ ಕೂಡ ಮಹತ್ವದ ಪಾತ್ರವಿದೆ. ಕಮ್ಯುನಿಸ್ಟ್ ಪಕ್ಷ ಮತ್ತು ಫ್ಯಾಸಿಸ್ಟ್ ವಿರೋಧಿ ಶಕ್ತಿಗಳೊಂದಿಗೆ ಸೇರಿ ಈತ ಕ್ಯುಸಲಿಂಗ್, ಐಯಾನ್ ಎನಾಸ್ಕ್ಯುರನ್ನು ಬಂಧಿಸುವ ಕೆಲಸ ನಿರ್ವಹಿಸಿ ಆಕಾಶವಾಣಿ ಮೂಲಕ ಜನತಾ ಗಣರಾಜ್ಯದ ಸ್ಥಾಪನೆಯ ಘೋಷಣೆ ಮಾಡಿದ.

ರೊಮೇನಿಯಾದ ವಿಮೋಚನೆಯು ರೊಮೇನಿಯಾವನ್ನು ಸೋವಿಯತ್ ಯೂನಿಯನ್ನಿನ ವಿರುದ್ಧದ ಹಿಟ್ಲರನ ಸಂಪರ್ಕವನ್ನು ಕೊನೆಗೊಳಿಸಿತು. ಹಾಗು ರೊಮೇನಿಯಾವು ತನ್ನ ಅಸ್ತ್ರವನ್ನು ಹಿಟ್ಲರನ ಜರ್ಮನಿ ವಿರುದ್ಧ ತಿರುಗಿಸುವಂತೆ ಮಾಡಿತು—ತನ್ಮೂಲಕ ಸಾಮಾಜಿಕ ಕ್ರಾಂತಿ ಹಾಗು ರಾಷ್ಟ್ರೀಯ ವಿಮೋಚನೆಗೆ ಅನುವು ಮಾಡಿತು. 50 ವರ್ಷಗಳ ಹಿಂದೆ ರೊಮೇನಿಯಾದ ಕಾರ್ಮಿಕರ ಪಕ್ಷ ಸ್ಥಾಪನೆಯಾದಂದೇ ಇದಕ್ಕೆ ತಳಪಾಯ ಹಾಕಲಾಗಿತ್ತು. 1893ರಲ್ಲಿ ಸಂಘಟಿಸಲ್ಪಟ್ಟ ಸೋಶಿಯಲ್ ಡೆಮೋಕ್ರಟಿಕ್ ಪಕ್ಷವು 1921ರಲ್ಲಿ ಕಮ್ಯೂನಿಸ್ಟ್ ಪಕ್ಷವಾಗಿ ರೂಪಾಂತರ ಹೊಂದಿತು ಕಾರ್ಮಿಕ ವರ್ಗದ ಪಕ್ಷದ ಅರ್ಧಶತಮಾನ ಕಾಲದ ಚಟುವಟಿಕೆಗಳು ರಾಜಪ್ರಭುತ್ವವನ್ನು ಕೊನೆಗೊಳಿಸುವ ಹಾಗು ಗಣರಾಜ್ಯವನ್ನು ಸ್ಥಾಪಿಸುವ ಕ್ರಾಂತಿಕಾರಕ ಪರಿವರ್ತನೆಗೆ ಸಿದ್ಧತೆಗೊಳಿಸುವ ಕೆಲಸವೇ ಆಗಿತ್ತು. 1967, ಡಿಸೆಂಬರ್ 30 ರಂದು ರಾಜಪ್ರಭುತ್ವ ಕೊನೆಯಾದಾಗ ರೊಮೇನಿಯಾ ಜನತಾ ಗಣರಾಜ್ಯವು ಸಾರಲ್ಪಟ್ಟಿತು. ಇದು ಕಾರ್ಮಿಕ ವರ್ಗದ ಪಕ್ಷ ಹಾಗು ಅದರ ಜೊತೆಗಾರ ಪಕ್ಷಗಳು ಪಡೆದ ರಾಜಕೀಯ ವಿಜಯವೇ ಆಗಿದೆ.

1948ರ ಏಪ್ರಿಲ್ ತಿಂಗಳಲ್ಲಿ ರೊಮೇನಿಯಾ ಜನತಾ ಗಣರಾಜ್ಯದ ಪ್ರಥಮ ಸಂವಿಧಾನ ಜಾರಿಗೆ ಬಂತು—ಹಾಗು ಇದು 1965ರ ಆಗಸ್ಟ್ 21ರವರೆಗೆ ಜಾರಿಯಲ್ಲಿತ್ತು. 1961ರಲ್ಲಿ ರೊಮೇನಿಯಾ ಸಮಾಜವಾದಿ ಗಣರಾಜ್ಯದ ಸಂವಿಧಾನವು ಅಂಗೀಕರಿಸಲ್ಪಟ್ಟಾಗ 'ರಾಜ್ಯ ಕೌನ್ಸಿಲ್' ರಾಜ್ಯದ ಅತ್ಯುನ್ನತ ಘಟಕವಾಗಿ ಸ್ಥಾಪಿಸಲ್ಪಟ್ಟಿತು. ಇದು ಗಿಯೋರ್ಗ್ಗಿಡೇಗ್ (1961-65) ಮತ್ತು ನಂತರ ಚಿವ್‌ಸ್ಟ್ಯಾಕ್ (1965-67) ಇವರ ನೇತೃತ್ವದಲ್ಲಿತ್ತು. 1967 ಡಿಸೆಂಬರ್‌ನಲ್ಲಿ ರೊಮೇನಿಯಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಕೋಲೆ ಚಿಯಾಸ್ಕಿಯವರು ರಾಜ್ಯ ಕೌನ್ಸಿಲ್‌ನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

1974ರ ಮಾರ್ಚ್ 25—26 ಸಮಾವೇಶಗೊಂಡ ರೊಮೇನಿಯಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಮಾಜವಾದಿ ರೊಮೇನಿಯ ಗಣರಾಜ್ಯದ ಅಧ್ಯಕ್ಷ ಸ್ಥಾನವನ್ನು ಆರಂಭಿಸಲು ನಿರ್ಧರಿಸಿ 1974ರ ಮಾರ್ಚ್ 28ರಲ್ಲಿ ಕಮ್ಯೂನಿಸ್ಟ್ ಪಕ್ಷದ ವಿಸ್ತೃತ ಕೌನ್ಸಿಲ್ ನಿಕೋಲೆ ಚಿಯಾಸ್ಕಿಯವರನ್ನು ರೊಮೇನಿಯಾದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಇವರು 1975 ಮಾರ್ಚ್ ಮತ್ತು 1980 ಮಾರ್ಚ್‌ನಲ್ಲಿ ಮರು ಚುನಾಯಿಸ್ಪಟ್ಟರು.

ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಚಿಯಾಸ್ಕಿ ಮುಖಂಡತ್ವದಲ್ಲಿ ಸಮಾಜವಾದಿ ರೊಮೇನಿಯಾ ಗಣ ರಾಜ್ಯವು ಇಡೀ ರಾಷ್ಟ್ರದ ಜನರ ಜೀವನ ಸ್ಥಿತಿಯನ್ನು ಏರಿಸುವಲ್ಲಿ ಹಾಗು ರಾಷ್ಟ್ರದ ಏಕತೆ ಮತ್ತು ಸ್ವಾತಂತ್ರ್ಯವನ್ನು ಗಟ್ಟಿಗೊಳಿಸುವಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಿತು. ಶಾಂತಿ ಮತ್ತು ನಿಶಸ್ತ್ರೀಕರಣಕ್ಕಾಗಿ ಹಾಗು ಹೊಸ ಅಂತರ ರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಬೆಳೆಸುವ ನೀತಿಯನ್ನು ಸಮಾಜವಾದಿ ರೊಮೇನಿಯಾ ಗಣರಾಜ್ಯವು ಅನುಸರಿಸುತ್ತಿದೆ.

(ಪಿ.ಡಿ.ಕೃಪೆ)

—ಕುಮಾರ್ ಕುಂದಾಪುರ

●

ಮುಖ್ಯ ಮಂತ್ರಿಯವರೊಡನೆ ಕಾರ್ಮಿಕ ಮುಖಂಡರ ಭೇಟಿ

ದಿನಾಂಕ 17-1-1983 ರಂದು ಸಿ.ಐ.ಟಿ.ಯು.ನ ಉಪಾಧ್ಯಕ್ಷರಾದ ಕಾಂ| ಎನ್. ಕೆ. ಉಪಾಧ್ಯಾಯ, ಕಾರ್ಯದರ್ಶಿ ಕಾಂ| ವಿ.ಜೆ.ಕೆ ನಾಯರ್ ಹಾಗೂ ಖಜಾಂಚಿ ಕಾಂ. ಟಿ. ಎಸ್. ಅನಂತರಾವ್ ಅವರುಗಳು ರಾಜ್ಯದ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರನ್ನು ಭೇಟಿ ಮಾಡಿ ಹರಿಹರ ಪಾಲಿಫೈಬರ್ಸ್ ಕಾರ್ಮಿಕರ 3 ತಿಂಗಳ ಮುಷ್ಕರ, ಬಾಗಲಕೋಟಿ ಸಿಮೆಂಟ್ ಫ್ಯಾಕ್ಟರಿಯ ಕಾರ್ಮಿಕರ ಮೇಲೆ ಇಂದಿರಾ ಕಾಂಗ್ರೆಸ್ ಗೂಂಡಾಗಳ ಆಕ್ರಮಣ ಹಾಗೂ ಬೆಂಗಳೂರಿನ ಕ್ಯಾಪ್‌ಸ್ಟೀಲ್ ಕಾರ್ಮಿಕರ ಮೇಲೆ ನಡೆಯುತ್ತಿರುವ ಪೋಲೀಸ್ ದೌರ್ಜನ್ಯ ಮುಂತಾದವುಗಳ ಕುರಿತು ಚರ್ಚೆ ನಡೆಸಿ ಮನವಿ ಪತ್ರವನ್ನರ್ಪಿಸಿದ್ದಾರೆ.

ಮುಖ್ಯ ಮಂತ್ರಿಗಳು ಈ ಕುರಿತು ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿರುವುದಾಗಿ ತಿಳಿದು ಬಂದಿದೆ.

●

ನೆರೆಹೊರೆ

ಪಶ್ಚಿಮ ಬಂಗಾಲ :

ಸೆಣಬು ಉದ್ಯಮದ ರಾಷ್ಟ್ರೀಕರಣಕ್ಕೆ ಒತ್ತಾಯ

ಸೆಣಬು ಉದ್ಯಮದ ಗುತ್ತೇದಾರರು ತಮ್ಮ ಉದ್ಯಮ ಕಷ್ಟಕಾಲಲ್ಲಿದೆಯೆಂದು ಅಳುತ್ತಲೇ ಇದ್ದಾರೆ; ಇನ್ನೊಂದೆಡೆ ಲಕ್ಷಗಟ್ಟಲೆ ರೂಪಾಯಿಗಳ ಲಾಭ ದೋಚುತ್ತಲೇ ಇದ್ದಾರೆ. ಸೆಣಬು ಬೆಳೆಯುವವರನ್ನೂ, ಸೆಣಬು ಕಾರ್ಮಿಕರನ್ನೂ ಸುಲಿದು ಲಾಭ ದೋಚುವುದು ಮಾತ್ರ ತಮ್ಮ ಕೆಲಸ. ಉದ್ಯಮವನ್ನು ಬೆಳೆಸುವುದು ಸರಕಾರದ ಹಾಗೂ ಜನಸಾಮಾನ್ಯರ ಜವಾಬ್ದಾರಿ ಎಂದು ಅವರು ತಿಳಿದುಕೊಂಡಂತಿದೆ.

ಸಣಬು ಉದ್ಯಮದಲ್ಲಿ ಈಗ ತಲೆದೋರಿರುವ ಬಿಕ್ಕಟ್ಟಿಗೆ ಎರಡು ಕಾರಣಗಳು. ಮೊದಲನೇಯದು, ಲಾಭವೇ ಮುಖ್ಯ ಅಂಶವಾಗಿರುವ ಬಂಡವಾಳಶಾಹೀ ಉದ್ಯಮಗಳೆಲ್ಲಾ ಆಗಾಗ ಎದುರಿಸಬೇಕಾದ ಸಮಸ್ಯೆ. ಎರಡನೇಯದು, ನಮ್ಮ ದೇಶದ ಸೆಣಬು ಗುತ್ತೇದಾರರು ಉದ್ಯಮದ ಬಗ್ಗೆ ತಳೆದಿರುವ ಧೋರಣೆ. ವಿದೇಶೀ ಮಾರುಕಟ್ಟೆ, ವಿಶೇಷವಾಗಿ ಅಮೇರಿಕಾದ ಮಾರುಕಟ್ಟೆಗೆ ರಫ್ತು ಮಾಡಲು ಮಾತ್ರ ಹೆಚ್ಚೆಚ್ಚು ಸಂಪನ್ಮೂಲಗಳನ್ನು ಇವರು ವಿನಿಯೋಗಿಸುತ್ತಿದ್ದಾರೆ. ಆದರೆ ವಾಸ್ತವವಾಗಿ ಈ ಮಾರುಕಟ್ಟೆಯ ಪ್ರಮಾಣ ಕುಗ್ಗುತ್ತಿದ್ದು, ದೇಶದ ಆಂತರಿಕ ಮಾರುಕಟ್ಟೆ ವಿಸ್ತಾರವಾಗುತ್ತಿದ್ದರೂ ಆ ಬಗ್ಗೆ ಈ ಗುತ್ತೇದಾರರು ಗಮನ ಹರಿಸುವುದೇ ಇಲ್ಲ. ರಫ್ತು ಬೆಲೆಯಿಳಿಯುತ್ತಿದ್ದರೂ, ದೇಶದೊಳಗೇ ಉಪಯೋಗಿಸುವ ಸಣಬಿನ ಬೆಲೆ ಜಾಸ್ತಿಯಾಗಬೇಕು, ಅದಕ್ಕಾಗಿ ಸೆಣಬು ಬೆಳೆಯುವವರಿಗೆ ಕಡಿಮೆ ಬೆಲೆ ಕೊಡಬೇಕು, ಸಣಬು ಕಾರ್ಮಿಕರಿಗೆ ವೇತನ ಕಡಿತವನ್ನು ಒಪ್ಪಬೇಕೆಂಬುದು ಇವರ ವಿಚಿತ್ರವಾದ.

ಪಶ್ಚಿಮ ಬಂಗಾಲದ ಬಜ್.ಬಜ್‌ನಲ್ಲಿ ಡಿಸೆಂಬರ್ 27 ರಿಂದ 29ರವರೆಗೆ ಜರುಗಿದ ಬಂಗಾಲ ಸೆಣಬು ಕಾರ್ಮಿಕರ ಸಂಘ ತನ್ನ 44ನೇ ವಾರ್ಷಿಕ ಸಮ್ಮೇಳನ ಈ ಕಾರಣಕ್ಕಾಗಿ ಸಣಬು ಉದ್ಯಮವನ್ನು ತಕ್ಷಣ ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸಿದೆ. ಸಣಬು ಬೆಳೆಯುವವರು ಹಾಗೂ ಸಣಬು ಉದ್ಯಮಗಳಲ್ಲಿ ದುಡಿಯುವ ಕಾರ್ಮಿಕರ ಹಿತರಕ್ಷಿಸಬೇಕಾದರೆ, ಮಾತ್ರವಲ್ಲ ದೇಶದ ಆರ್ಥಿಕ ಹಿತರಕ್ಷಣೆಗಾಗಿ ಇದು ಅನಿವಾರ್ಯ. ಯಾಕೆಂದರೆ ಸಣಬು ಗುತ್ತೇದಾರರು ತಮ್ಮ ಉದ್ಯಮಕ್ಕೆ ಕಚ್ಚಾಮಾಲು ಪೂರೈಸುವ ಬೆಳೆಗಾರರು ಹಾಗೂ ತಮ್ಮ ಉದ್ಯಮಗಳಲ್ಲಿ ಬೆವರುಸುರಿಸುವ ಕಾರ್ಮಿಕರನ್ನು ಲೂಟಿ ಮಾಡುವುದು ಮಾತ್ರವಲ್ಲ ಉದ್ಯಮವನ್ನು ನಿರ್ಲಕ್ಷಿಸಿ ಅದು ದುರ್ಗತಿ ಹೊಂದುವಂತೆ ಮಾಡಿದ್ದಾರೆ. 1979ರಲ್ಲಿ ಮಾಡಿಕೊಂಡ ಒಪ್ಪಂದವನ್ನು ಏಕಪಕ್ಷೀಯವಾಗಿ ಮುರಿದು, ರಾಜ್ಯದ ಕಾರ್ಮಿಕ ಮಂತ್ರಿಯವರು ತ್ರಿಪಕ್ಷೀಯ ಸಭೆಯಲ್ಲಿ ನೀಡಿದ ಅವಾರ್ಡನ್ನೂ ಉಲ್ಲಂಘಿಸುತ್ತಿದ್ದಾರೆ. ಆದ್ದರಿಂದ ಪಶ್ಚಿಮ ಬಂಗಾಲದ 65 ಸಣಬು ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಎರಡೂವರೆ ಲಕ್ಷ ಕಾರ್ಮಿಕರು ಮತ್ತೊಮ್ಮೆ ಜಂಟಿ ಹೋರಾಟಕ್ಕೆ ಸನ್ನದ್ಧರಾಗುತ್ತಿದ್ದಾರೆ.

ಕೇರಳ :

ಬಿರ್ಲಾ ವ್ಯವಸ್ಥಾಪಕರಿಂದ ಬೀಗ ಮುದ್ರೆ

ಕೋಝಿಕೋಡ್‌ನ ಸಮೀಪವಿರುವ ಮಾವೂರಿನ ಗ್ವಾಲಿಯರ್ ರೇಯಾನ್ ಕಾರ್ಖಾನೆಯಲ್ಲಿ ಡಿಸೆಂಬರ್ 23ರ ನಡುರಾತ್ರಿಯಿಂದ ಸಂಪೂರ್ಣ ಬೀಗ ಮುದ್ರೆ ಘೋಷಿಸಲಾಗಿದೆ. ಒಟ್ಟು 5000 ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ.

ಬಿರ್ಲಾಗುಂಪಿಗೆ ಸೇರಿದ ಈ ಕಾರ್ಖಾನೆ ಅಪಾರ ಲಾಭ ಗಳಿಸುತ್ತಿದ್ದರೂ, ಈ ಲಾಭಕ್ಕೆ ಮೂಲವಾದ ಉತ್ಪಾದನೆಯಿಂದ ಸುತ್ತಮುತ್ತಲ ನೀರನ್ನು ಮಲಿನಗೊಳಿಸಿದರೂ ಅದನ್ನು ತಡೆಯಲು ಯಾವ ಗಮನವನ್ನೂ ಹರಿಸಲಿಲ್ಲ. ಜಲಮಾಲಿನ್ಯ ಹತೋಟಿ ಮಂಡಳಿ ಹಲವು ಬಾರಿ ಈ ಬಗ್ಗೆ ಕಂಪೆನಿಗೆ ನಿರ್ದೇಶನವಿತ್ತಿದ್ದರೂ ಅವೆಲ್ಲವನ್ನೂ ಉಪೇಕ್ಷಿಸಿದ ವ್ಯವಸ್ಥಾಪಕ ವರ್ಗ ಇತ್ತೀಚೆಗೆ ಮಾತ್ರ ಜಲಮಾಲಿನ್ಯವನ್ನು ಹತೋಟಿಯಲ್ಲಿಡುವುವ ವ್ಯವಸ್ಥೆ ಮಾಡುವ ನೆಪದಲ್ಲಿ ಸುಮಾರು 7 ತಿಂಗಳು ಕಾಲ ಕಾರ್ಖಾನೆಗೆ ಬೀಗ ಮುದ್ರೆ ಹಾಕಿತು. ಈ ಆಕ್ಟೋಬರ್ 11 ರಂದಷ್ಟೇ ಕಾರ್ಖಾನೆ ಮತ್ತೆ ತೆರೆಯಿತು. ಬಹುಶಃ ಮತ್ತೆ ಮುಚ್ಚಬೇಕೆಂಬ ನಿರ್ಧಾರದಿಂದಲೇ ಅದನ್ನು ತೆರೆದಿರಬೇಕು.

ಯಾಕೆಂದರೆ ಕಾರ್ಖಾನೆ ತೆರೆದ ಮರುದಿನವೇ ವೇತನ ಹಾಗೂ ಸೇವಾ ಶರ್ತಗಳಿಗೆ ಸಂಬಂಧಿಸಿದಂತೆ ಇದ್ದ ದೀರ್ಘಕಾಲದ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದುಗೊಳಿಸಲಾಯಿತು. ನಂತರ 1418 ಕಾರ್ಮಿಕರಿಗೆ ಕೆಲಸದಿಂದ ವಜಾ ಮಾಡುವ ನೋಟೀಸು ನೀಡಲಾಯಿತು. ಕಾರ್ಖಾನೆಯಲ್ಲಿನ ಉತ್ಪಾದನಾ ಮಟ್ಟ ಇಳಿಸಲು ಹೀಗೆ ಮಾಡಲಾಯಿತು. ಇಷ್ಟೇ ಅಲ್ಲ, ಮ್ಯಾನೇಜ್‌ಮೆಂಟ್ ಹೇಳಿಕೆಯ ಪ್ರಕಾರವೇ ಲಾಭಗಳಿಸುತ್ತಿದ್ದ ಕಾಗದ ಘಟಕವನ್ನೂ ಮುಚ್ಚಿರುವುದರಿಂದ ಅಲ್ಲಿದ್ದ 178 ಕಾರ್ಮಿಕರು ಈಗ್ಗ ಡಿಸೆಂಬರ್ ತಿಂಗಳಿಂದ ಬೀದಿಪಾಲಾಗಿದ್ದಾರೆ. ಈ ಕಾರ್ಖಾನೆಗಳ 40 ಉನ್ನತ ಅಧಿಕಾರಿಗಳಿಗೆ ಈಗಾಗಲೇ ಕಂಪೆನಿ ಬಿಟ್ಟು ಹೋಗಲು ಅನುಮತಿ ನೀಡಲಾಗಿದೆ. ಅಂದರೆ ಬಿರ್ಲಾಗುಂಪು ಕಂಪನಿಯನ್ನು ಮುಚ್ಚಿ ಕಾರ್ಮಿಕರನ್ನೆಲ್ಲಾ ಬೀದಿಪಾಲು ಮಾಡುವ ಹವಣಿಕೆಯಲ್ಲಿದೆ.

ಈ ಅನ್ಯಾಯ ಪೂರ್ಣ ಬೀಗ ಮುದ್ರೆಯ ವಿರುದ್ಧ ಹೋರಾಡಲು ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ ತಯಾರಿ ನಡೆಸುತ್ತಿದೆ.

○

ಗುಜರಾತ್ :

ಕಾಂಗ್ರೆಸ್ (ಐ) ಒಳ ಜಗಳ—ಕೋಮುವಾದಿಗಳು—ಕೋಮುದಂಗೆ

ಬರೋಡಾನಗರ ಸೆಪ್ಟೆಂಬರ್ 1981 ರಿಂದ ಹಲವು ಬಾರಿ ಕೋಮು ಗಲಭೆಗಳ ದವಡೆಗೆ ಸಿಲುಕಿತ್ತು. ಆದರೆ ಸೆಪ್ಟೆಂಬರ್ 1982 ರವರೆಗೆ ವಿಶೇಷ ಘಟನೆಗಳೇನೂ ನಡೆದಿರಲಿಲ್ಲ. ಸೆಪ್ಟೆಂಬರ್ 1982ರಲ್ಲಿ ಈಗ ವರ್ಗವಾಗಿರುವ ಜಸ್‌ಪಾಲ್‌ಸಿಂಗ್ ಪೋಲೀಸ್ ಕಮಿಶನರ್ ಆಗಿ ಅಧಿಕಾರ ವಹಿಸಿಕೊಂಡಂದಿನಿಂದ ಕೋಮು ಪರಿಸ್ಥಿತಿ ಹದಗೆಡಲಾರಂಭಿಸಿತು. 1982ರಲ್ಲಿ ದಸರಾ ಮೊಹರಂ ಒಂದೇ ದಿನ ಅಂದರೆ ಅಕ್ಟೋಬರ್ 27 ರಂದು ಬಂದಿತ್ತು. ಹಿಂದೂಗಳ ದಸರಾ ಮೆರವಣಿಗೆಗೆ ಸಾಕಷ್ಟು ಬಂದೋಬಸ್ತು ನೀಡಿದ ಪೋಲೀಸರು ಮುಸ್ಲಿಮರ ಮೊಹರಂ ಮೆರವಣಿಗೆಗೆ ಸಾಕಷ್ಟು ಬಂದೋಬಸ್ತು ಮಾಡಲಿಲ್ಲವೆನ್ನಲಾಗಿದೆ. ಅದರಿಂದಾಗಿ ಗಲಭೆಗಳಾದವು. ಅಲ್ಲದೆ ಬರೋಡಾದಲ್ಲಿದ್ದ ರಿಸರ್ವ್ ಪೋಲೀಸರನ್ನು ಅಕ್ಟೋಬರ್ 24 ರಂದೇ ಅಲ್ಲಿಂದ ವಾಪಾಸು ಕಳಿಸಲಾಗಿತ್ತಂತೆ. ಅಕ್ಟೋಬರ್ 27ರಂದು ಮುಸ್ಲಿಮರ ಪ್ರದೇಶಗಳಲ್ಲಿ ಭಯೋತ್ಪಾದಕ ವಾತಾವರಣ ಉಂಟುಮಾಡಲಾಯಿತೆಂದು ಮುಸ್ಲಿಮರ ಒಂದು ವಿಭಾಗ ಆಪಾದಿಸಿದೆ. ಪೋಲೀಸರ ಈ ಭೇದಭಾವದ ಬಗ್ಗೆ ಪ್ರಮುಖ ಮುಸ್ಲಿಂ ನಾಗರಿಕರು ಸರಕಾರಕ್ಕೆ ಹಲವು ಮನವಿ ಸಲ್ಲಿಸಿದರೂ ಒಳ ಜಗಳಗಳಲ್ಲಿ ಮುಳುಗಿದ್ದ ಕಾಂಗ್ರೆಸ್(ಐ) ಸರಕಾರ ಮುಸ್ಲಿಂ ಜನತೆಯಲ್ಲಿ ಭದ್ರತೆಯ ಭಾವನೆ ಹುಟ್ಟಿಸಲು ಏನೂ ಮಾಡಲಿಲ್ಲ. ಅತ್ತ ಹಿಂದೂ ಮೆರವಣಿಗೆಗೆ ರಕ್ಷಣೆಯಿತ್ತುದಕ್ಕಾಗಿ ಪೋಲೀಸ್ ಕಮಿಶನರನನ್ನು ಕಾರ್ತಿಕ ಹುಣ್ಣಿಮೆಯಂದು ಹೂಮಾಲೆ ಹಾಕಿ ಅಭಿನಂದಿಸಲಾಯಿತಂತೆ. ಬರೋಡಾದ ಉಪ ಮೇಯರ್ ಸೇರಿದಂತೆ ಐವರು ಮುಸ್ಲಿಂ ಕಾರ್ಪೊರೇಟರುಗಳು ಸರಕಾರದ ಮೇಲೆ ಬೇಸರದಿಂದ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು.

1982 ಡಿಸೆಂಬರ್ 13 ರಂದು ಪೋಲೀಸ್ ಕಮೀಶನರ್ ಜಸಪಾಲ್ ಸಿಂಗನ್ನು ರಾಜಧಾನಿ ಗಾಂಧಿನಗರಕ್ಕೆ ಕರೆಸಿ ಸರಕಾರದ ಮುಖ್ಯ ಕಾರ್ಯದರ್ಶಿಗಳೇ ಮುಖತಃ ಬರೋಡಾದಿಂದ ಆತನನ್ನು ವರ್ಗ ಮಾಡಿರುವ ಆಜ್ಞೆಯನ್ನು ತಿಳಿಸಿದರು. ಈ ಸುದ್ದಿ ತಕ್ಷಣ ಬರೋಡಾ ವಿಶ್ವವಿದ್ಯಾನಿಲಯದ ಕೆಲವು ವಿದ್ಯಾರ್ಥಿಗಳಿಗೆ ತಲುಪುವಂತೆ ಮಾಡಿ ಈ ವರ್ಗದ ಆಜ್ಞೆಯನ್ನು ರದ್ದು ಮಾಡುವಂತೆ ಒತ್ತಾಯ ಹೇರುವ ಪರಿಸ್ಥಿತಿಯನ್ನುಂಟುಮಾಡಲು ಪ್ರಯತ್ನಿಸಲಾಯಿತು. ಬಿ.ಜೆ.ಪಿ.ಯ ವಿದ್ಯಾರ್ಥಿ ಸಂಘಟನೆ, ಅಖಿಲ ಭಾರತ ವಿದ್ಯಾರ್ಥಿ ಪರಿಷದ್ ಈ ಪರಿಸ್ಥಿತಿಯ ಪೂರ್ಣ ಉಪಯೋಗಪಡೆದುಕೊಂಡಿತು. ಮುಂಬೈಗೆ ಹೊರಟಿದ್ದ ಮೇಯರ್ ಹಾಗೂ ಇತರ ನಾಲ್ವರು ಕಾರ್ಪೊರೇಟರ್‌ಗಳನ್ನು ಕೆಲವು ಉನ್ಮತ್ತ ವಿದ್ಯಾರ್ಥಿಗಳು ರೈಲುಗಾಡಿಯಿಂದ ಹಿಡಿದೆಳೆದು ರಸ್ತೆಯಲ್ಲಿ ನಡೆಸಿಕೊಂಡು ಹೋಗಿ ಅವರನ್ನೆಲ್ಲಾ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವಂತೆ ಬಲವಂತ ಮಾಡಿದರು. ಆ ದಿನ ರಾತ್ರಿ ಹಾಗೂ ಮರುದಿನ ಹೊಸ ಕಮಿಶನರ್ ಪಿ. ಕೆ. ದತ್ತಾ ಅಧಿಕಾರ ವಹಿಸಿಕೊಳ್ಳುವವರೆಗೆ ಮುಸ್ಲಿಂ ಪ್ರದೇಶಗಳಲ್ಲಿ ಉನ್ಮತ್ತ ಲೂಟಿ ನಡೆಯಿತು. ಕೆಲವು ಹಿಂದೂ ಅಂಗಡಿಗಳ ಲೂಟಿಯೂ ಆಯಿತು. ವರ್ಗಗೊಂಡ ಜಸ್‌ಪಾಲ್‌ಸಿಂಗ್ ಸಿಗದ್ದರಿಂದ ಪಿ. ಕೆ. ದತ್ತಾ ಅಧಿಕಾರ ವಹಿಸಿಕೊಳ್ಳಲು ತಡವಾಯಿತು. ಕೊನೆಗೂ ಜಸ್‌ಪಾಲ್ ಸಿಂಗ್ ಇಲ್ಲದೇ ದತ್ತಾ ಅಧಿಕಾರ ವಹಿಸಿಕೊಳ್ಳಬೇಕಾಯಿತು. ಈ ನಡುವೆ ಆವರೆಗೆ ನಡೆದ ಎಲ್ಲಾ ಕೋಮು ಗಲಭೆಗಳನ್ನು ಸೇರಿಸಿದರೂ ನಡೆಯದ ಅನಾಹುತ, ಪ್ರಾಣಹಾನಿ ಈ ಗಲಭೆಗಳಲ್ಲಿ ನಡೆಯಿತು. ಹೊಸ ಕಮೀಶನರ್ ಬಂದ ಕೂಡಲೇ ಕರ್ಫ್ಯೂ ವಿಧಿಸಲಾಯ್ತು. ಈಗ ಪರಿಸ್ಥಿತಿ ಸಾಮಾನ್ಯವಾಗಿದೆ. ಆದರೆ ವರ್ಗಗೊಂಡ ಜಸಪಾಲ್ ಸಿಂಗ್ ವರ್ಗದ ಆಜ್ಞೆ ರದ್ದು ಮಾಡಿಸಿಕೊಳ್ಳಲು ನ್ಯಾಯಾಲಯಕ್ಕೆ ಅಪೀಲು ಹೋಗಿದ್ದಾರಂತೆ.

ಬರೋಡಾನಗರದ ಜನಸಂಖ್ಯೆಯಲ್ಲಿ ಕೇವಲ 15 ಶೇಕಡಾದಷ್ಟಿರುವ ಮುಸ್ಲಿಮರಲ್ಲಿ ಬಹುಮಂದಿ ಬಡ ಕೂಲಿಕಾರರು. ಮೋಮಿನ್ ಎಂಬ ವ್ಯಾಪಾರೀ ವಿಭಾಗ ಮಾತ್ರ ಸ್ವಲ್ಪ ಅನುಕೂಲವಿದ್ದವರು. ಗುಜರಾತ್ ಸಂಪೂರ್ಣ ಪಾನನಿರೋಧವಿರುವ ರಾಜ್ಯ. ಬರೋಡಾದಲ್ಲಿ ಕಳ್ಳಭಟ್ಟಿಯ ವ್ಯಾಪಾರ ವ್ಯಾಪಕವಾಗಿ ನಡೆಯುತ್ತಿದೆ. ಇದುವರೆಗೆ ಈ ವ್ಯಾಪಾರದಲ್ಲಿ ಬಹಳಷ್ಟು ಮುಸ್ಲಿಮರಿದ್ದರು. ಇತ್ತೀಚೆಗೆ ಹಿಂದೂ ಶಹಾರ್ ಕೋಮು ಇವರೊಂದಿಗೆ ಸ್ಪರ್ಧೆಗಿಳಿದಿತ್ತು. ಈ ವ್ಯಾಪಾರೀ ಪ್ರತಿಸ್ಪರ್ಧೆಯೂ ಕೋಮು ಅಶಾಂತಿಗೆ ಸ್ವಲ್ಪ ಮಟ್ಟಿಗೆ ಕಾರಣ. ಕೆಲವರನ್ನು ಬಿಟ್ಟರೆ ಪೋಲೀಸ್ ವಿಭಾಗ ಮೇಲಿನಿಂದ ಕೆಳಗಿನವರೆಗೆ ಈ ಕಳ್ಳ ವ್ಯಾಪಾರದಲ್ಲಿ ಮೂಗಿನವರೆಗೆ ಮುಳುಗಿದೆ. ಆಳುವ ಪಕ್ಷದ ಯಜಮಾನರಿಗೆ ಈ ಕಳ್ಳ ವ್ಯಾಪಾರಿಗಳೊಡನೆ ಸದಾ ಸಂಬಂಧವಿದೆ. ವರ್ಗಗೊಂಡಿರುವ ಪೋಲೀಸ್ ಕಮೀಶನರ್ ಇದರಲ್ಲಿ ಶಾಮೀಲಾಗಿದ್ದರಂತೆ. ಈಗಿನ ಕಮಿಶನರ್ ದತ್ತಾ ಹಿಂದೆ ಇಲ್ಲಿ ಡಿ.ಎಸ್.ಪಿ., ಎಸ್.ಪಿ. ಆಗಿದ್ದಾಗ ಈ ಕಳ್ಳ ವ್ಯಾಪಾರವನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದರಂತೆ.

ಸಿ. ಪಿ. ಐ. (ಎಂ) ನ ಪಾಲಿಟ್ ಬ್ಯೂರೋ ಸದಸ್ಯ ಇ ಬಾಲಾನಂದನ್ ಹಾಗೂ ಎಂ. ಪಿ. ಸುಶೀಲ್ ಭಟ್ಟಾಚಾರ್ಯ ಜನವರಿ 2 ಹಾಗೂ 3ರಂದು ಬರೋಡಾಕ್ಕೆ ಭೇಟಿ ಮಾಡಿ ಈ ಮೇಲಿನ ಮಾಹಿತಿ ಸಂಗ್ರಹಿಸಿದ್ದಾರೆ. ಪೋಲೀಸ್ ಕಮೀಶನರ್ ದತ್ತಾರವರನ್ನು ಇವರು ಭೇಟಿ ಮಾಡಿದಾಗ ಈ ಕೋಮುದಂಗೆಗಳಲ್ಲಿ ಬರೋಡಾದ ಕಾರ್ಮಿಕ ವರ್ಗ ಯಾವುದೇ ರೀತಿಯಲ್ಲಿ ಭಾಗವಹಿಸದೇ ಇದ್ದುದಕ್ಕಾಗಿ ಕಮೀಶನರ್ ಕಾರ್ಮಿಕ ವರ್ಗಕ್ಕೆ ಕೃತಜ್ಞತೆ ಸಲ್ಲಿಸಿದರಂತೆ.

●

ಐಕ್ಯರಂಗ
ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಪೊಲಿಟ್‌ಬ್ಯೂರೋ ಹೇಳಿಕೆ :

ಅಸ್ಸಾಂ ಚುನಾವಣೆ ಕುರಿತು

ಸಂವಿಧಾನದಲ್ಲಿ ತಿದ್ದುಪಡಿ ತಂದು ಅಸ್ಸಾಂನಲ್ಲಿ ಸತತವಾಗಿ ಮೂರನೇ ಅವಧಿಗೆ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಆಳುವ ಪಕ್ಷದ ಪ್ರಯತ್ನಗಳು ವಿಫಲವಾಗಿ ಚುನಾವಣೆಯ ವೇಳಾ ಪಟ್ಟಿಯನ್ನು ಈಗ ತಿಳಿಯಪಡಿಸಲಾಗಿದೆ ಎಂಬುದನ್ನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಗಮನಿಸಿದೆ.

ಅಸ್ಸಾಂನಲ್ಲಿ ಅತೃಪ್ತಿಕರ ವಾತಾವರಣದಲ್ಲಿ ಚುನಾವಣೆ ನಡೆಯುತ್ತಿದೆ ಎಂಬುದರ ಅರಿವು ಪಾಲಿಟ್‌ಬ್ಯೂರೋಗೆ ಇದೆ. 1979ರ ಮತದಾರ ಪಟ್ಟಿಯ ಪ್ರಕಾರ ಚುನಾವಣೆ ನಡೆಯುವುದರಿಂದ ಕಳೆದ ಮೂರು ವರ್ಷಗಳಲ್ಲಿ ಪ್ರಾಪ್ತ ವಯಸ್ಕರಾದ ಸಾವಿರಾರು ಮಹಿಳೆಯರು ಹಾಗೂ ಪುರುಷರು ಮತ ಚಲಾಯಿಸುವ ತಮ್ಮ ಸಂವಿಧಾನಾತ್ಮಕ ಹಕ್ಕಿನಿಂದ ವಂಚಿತರಾಗುತ್ತಾರೆ. ಆದರೆ ರಾಷ್ಟ್ರಪತಿ ಆಳ್ವಿಕೆಯನ್ನು ಮುಂದುವರೆಸುವುದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರದಿರಬೇಕಾದರೆ ಈ ಅತೃಪ್ತಿಕರ ಪರಿಸ್ಥಿತಿಯಲ್ಲಾದರೂ ಚುನಾವಣೆ ನಡೆಸುವುದು ಇರುವ ಏಕೈಕ ದಾರಿ. ಯಾಕೆಂದರೆ ಈ ರೀತಿ ತಿದ್ದುಪಡಿ ತಂದರೆ ಅದು ಖಂಡಿತವಾಗಿಯೂ ಇನ್ನು ಮುಂದೆ ಆಳುವ ಪಕ್ಷ ಎಲ್ಲೆಲ್ಲಿ ಬಯಸುತ್ತದೋ ಅಲ್ಲೆಲ್ಲಾ ಪ್ರಜಾಪ್ರಭುತ್ವವನ್ನು ನಿರಾಕರಿಸಲು ಅದಕ್ಕೆ ದಾರಿ ತೋರಿಸಿದಂತಾಗುತ್ತದೆ

ಸಂವಿಧಾನದ ಪ್ರಜಾಪ್ರಭುತ್ವ ವಿರೋಧೀ ತಿದ್ದುಪಡಿ ಅಥವಾ ಅತೃಪ್ತಿಕರ ಮತದಾರ ಪಟ್ಟಿಯನ್ನಾಧರಿಸಿ ಚುನಾವಣೆ ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದ ಪರಿಸ್ಥಿತಿ ಬರಲು ಪ್ರಥಮ ಹೊಣೆ ಆಳುವ ಕಾಂಗ್ರೆಸ್ ಪಕ್ಷವೇ ಆದರೂ ಅಸ್ಸಾಂನ ಪರಿಸ್ಥಿತಿಯನ್ನು ತಮ್ಮ ಹಿತಕ್ಕಾಗಿ ಬಳಸಿಕೊಂಡ ಅಲ್ಪ ಕಾಲಾವಧಿಯ ಜನತಾ ಸರಕಾರ ಹಾಗೂ ಸಂಕುಚಿತವಾದಿ ಮತ್ತು ಪ್ರತ್ಯೇಕತಾವಾದೀ ಶಕ್ತಿಗಳದ್ದೂ ಇದರಲ್ಲಿ ಪಾಲು ಇದೆ.

ಸಮಯಸಾಧಕ ನಿಲುವು

ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಎರಡು ದಶಕಗಳ ಸತತ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷ ತಾನು ಅಧಿಕಾರದಲ್ಲುಳಿಯಲು ಎಲ್ಲಾ ತರದ ವಿಭಾಜಕ ಹಾಗೂ ಪ್ರತ್ಯೇಕತಾವಾದೀ ಶಕ್ತಿಗಳೊಂದಿಗೆ ಸಮಯಸಾಧಕ ಒಪ್ಪಂದಗಳನ್ನು ಮಾಡಿಕೊಂಡಿತು. ಈಗಲೂ ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ಪ್ರತ್ಯೇಕತಾವಾದಿಯಾದ ಟಿ. ಯು. ಜೆ. ಎಸ್. ನೊಂದಿಗೆ ಬಹಿರಂಗ ಮೈತ್ರಿ ಹೊಂದಿದೆ; ಕೇರಳದಲ್ಲಿ ಅರ್ಥ ಡಜ಼ನ್‌ಗೂ ಮಿಕ್ಕಿ ಜಾತಿವಾದಿ ಹಾಗೂ ಕೋಮುವಾದಿ ಸಂಘಟನೆಗಳೊಂದಿಗೆ ಮೈತ್ರಿಹೊಂದಿದೆ; ಮುಂಬೈಯಲ್ಲಿ ಬಹಳ ಕಾಲದವರೆಗೆ ಕಾಂಗ್ರೆಸ್ (ಐ) — ಶಿವಸೇನೆಯ ಮೈತ್ರಿಯಿತ್ತು. ಶಿವಸೇನೆಯೇ ತಾನಾಗಿ ಅದನ್ನು ಮುರಿಯುವವರೆಗೆ ಅದು ಇತ್ತು.

ಅಸ್ಸಾಂನಲ್ಲಿಯೇ ಈಗಿನ ಸ್ಥಿತಿಯುಂಟಾಗುವಲ್ಲಿ ಕಾಂಗ್ರೆಸ್ (ಐ) ವಹಿಸಿದ ಪಾತ್ರ ಕಮ್ಮಿ ಮಹತ್ವದ್ದೇನಲ್ಲ. ಈ ರಾಜ್ಯ ಹಿಂದುಳಿದಿರುವುದರಿಂದಾಗಿ ಜನತೆಗೆ ಉಂಟಾಗಿದ್ದ ನಿಜವಾದ ತೊಂದರೆಗಳನ್ನು ನಿವಾರಿಸುವಲ್ಲಿ ಅದು ವಿಫಲವಾಯಿತು. 1978ರ ಚುನಾವಣೆಯಲ್ಲಿ 126ರಲ್ಲಿ ಕೇವಲ 8 ಸ್ಥಾನ ಗೆದ್ದರೂ ಯಾವ ರೀತಿಯಲ್ಲಿ ನಾಚಿಕೆಯಿಲ್ಲದೆ ಪಕ್ಷಾಂತರಿಗಳ ಮೂಲಕ ತನ್ನ ಸಂಖ್ಯೆಯನ್ನು 53ಕ್ಕೇರಿಸಿ ಎರಡು ಅಲ್ಪಮತೀಯ ಸರಕಾರ ರಚಿಸಿತೆಂಬುದು ಆ ಪಕ್ಷದ ಪ್ರಜಾಪ್ರಭುತ್ವದ ಸೋಗನ್ನು ಬಯಲು ಮಾಡಿತು. ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸಲು ಸಂವಿಧಾನವನ್ನು ತಿದ್ದುಪಡಿಮಾಡುವ ಪ್ರಸ್ತಾಪವನ್ನು ಅದು ವಿರೋಧ ಪಕ್ಷಗಳೆದುರು ಇಟ್ಟದ್ದು ಅದರ ಈ ಸಮಯಸಾಧಕ ಧೋರಣೆ ಗೌರವಹೀನ ಅಂತ್ಯವೇ.

ಆದರೆ ಈಗ ಮುಂಬರುವ ಚುನಾವಣೆಗಳ ಬಹಿಷ್ಕಾರಕ್ಕೆ ಕರೆಕೊಟ್ಟಿರುವ ಜನತಾ, ಬಿ.ಜೆ.ಪಿ. ಹಾಗೂ ಲೋಕದಳಗಳು ಕೂಡಾ ಈ ಪರಿಸ್ಥಿತಿಯ ಹೊಣೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಾಸ್ತವವಾಗಿ ಮುಖ್ಯ ಮಂತ್ರಿ ಬೊರ್‌ಬೊರಾರವರ ಜನತಾ ಸರಕಾರದ ಅವಧಿಯಲ್ಲಿಯೇ ವಿದೇಶೀಯರೆಂದು ಕರೆಸಿಕೊಳ್ಳುವವರ ವಿರುದ್ಧ ಚಳವಳಿ ಆರಂಭವಾದದ್ದು; ನಂತರ ಹಜಾರಿಕಾ ಸರಕಾರ ಈ "ವಿದೇಶಿಯರ ವಿರೋಧೀ" ಚಳವಳಿಗೆ ಸಕ್ರಿಯ ನೆರವು ನೀಡಿತು. ಬೊರ್‌ಬೊರಾ ಹಾಗೂ ಹಜಾರಿಕಾ ಇಬ್ಬರೂ ತಮ್ಮ ಸರಕಾರಗಳಿಗೆ ಚಳವಳಿಗಾರರ ಬೆಂಬಲ ಕೋರಿದರು. 1978–79ರಲ್ಲಿ ಅಧಿಕಾರದಲ್ಲಿದ್ದ ಇಬ್ಬರೂ ಮುಖ್ಯ ಮಂತ್ರಿಗಳ ಪಕ್ಷವಾದ ಮಾಜೀ ಜನತಾ ಪಕ್ಷದ ಅಂಗಗಳಾಗಿದ್ದ ಈಗಿನ ಬಿ.ಜೆ.ಪಿ., ಜನತಾ ಹಾಗೂ ಲೋಕದಳಗಳು ಆಗಲೂ, ಈಗಲೂ ಚಳವಳಿಗೆ ಬೆಂಬಲ ನೀಡಿವೆ. ಇದೀಗ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಹಾಗೂ ಅಖಿಲ ಅಸ್ಸಾಂ ಗಣ ಸಂಗ್ರಾಮ ಪರಿಷತ್ ಜತೆಗೆ ಚುನಾವಣೆ ಬಹಿಷ್ಕರಿಸುವ ಘೋಷಣೆ ನೀಡಿವೆ.

ಅಲ್ಪಸಂಖ್ಯಾತರ ವಿರುದ್ಧ

ಇತರ ಹಲವು ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳಂತೆ ಸಿ.ಪಿ.ಐ. (ಎಂ) ಈ ಪ್ರತ್ಯೇಕತಾವಾದೀ ಚಳವಳಿಗೆ ದೃಢವಾದ ವಿರೋಧ ವ್ಯಕ್ತಪಡಿಸಿದೆ. ಈ "ವಿದೇಶೀಯರ ವಿರೋಧೀ" ಚಳವಳಿಯಲ್ಲಿ ಅದು ಅಸ್ಸಾಂನ ಭಾಷಾ, ಜನಾಂಗೀಯ ಹಾಗೂ ಧಾರ್ಮಿಕ ಅಲ್ಪ ಸಂಖ್ಯಾತರ ವಿರುದ್ಧ ಗುರಿಯಿಟ್ಟುಕೊಂಡ ಪ್ರಚಾರವನ್ನು ಕಂಡಿದೆ. ನಿಜವಾಗಿ "ವಿದೇಶೀಯರು" ಎಂದು ಕರೆಸಿಕೊಳ್ಳುವ ಜನ ಭಾರತದ ಇತರ ರಾಜ್ಯಗಳಲ್ಲಿರುವಂತೆ ವಿವಿಧ ರಾಜ್ಯಗಳಿಂದ ಬಂದು ಅಸ್ಸಾಂನಲ್ಲಿ ನೆಲಸಿರುವವರು ಅಥವಾ ಭಾರತದ ಇತರ ಕೆಲವು ರಾಜ್ಯಗಳಿಗೆ ಬಂದಂತೆ ಅಸ್ಸಾಂಗೂ ಹಿಂದೆ ಇದ್ದ ಪಾಕಿಸ್ತಾನದ ಪ್ರದೇಶಗಳಿಂದ ಬಂದ ನಿರಾಶ್ರಿತರು. ಪೂರ್ವ ಅಥವಾ ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆ ಪೂರ್ವ ಹಾಗೂ ಪಶ್ಚಿಮ ಭಾರತದ ಹಲವು ರಾಜ್ಯಗಳು ಎದುರಿಸಬೇಕಾಗಿ ಬಂದ ಸಾಮಾನ್ಯ ಸಮಸ್ಯೆ. ಈ ರೀತಿ ಅಸ್ಸಾಂನ "ವಿದೇಶೀಯರ ವಿರುದ್ಧ"ವಾದ ಚಳವಳಿ ವಾಸ್ತವವಾಗಿ ಒಂದೊಮ್ಮೆ ಒಟ್ಟಾಗಿದ್ದ ಭಾರತ ಈಗಿನ ಭಾರತ ಸಂಘ, ಪಾಕಿಸ್ತಾನ ಹಾಗೂ ಬಾಂಗ್ಲಾ ದೇಶಗಳಾಗಿ ವಿಭಜಿತವಾಗಿರುವುದರ ಬಲಿಪಶುಗಳಾಗಬೇಕಾಗಿ ಬಂದ ದುರದೃಷ್ಟಶಾಲೀ ಜನರ ವಿರುದ್ಧವೇ ಹೆಚ್ಚಾಗಿ ನಡೆಯುತ್ತಿದೆ. ಆದ್ದರಿಂದ ಈ ಚಳುವಳಿಯ ಮೂಲಭೂತ ನಿಲುವೇ ಈಗಿನ ಭಾರತ ಸಂಘ ಯಾವ ರಾಜಕೀಯ ಹಾಗೂ ನೈತಿಕ ಆಧಾರದ ಮೇಲೆ ನಿಂತಿದೆಯೋ ಅದನ್ನೇ ಉಲ್ಲಂಘಿಸುವ ನಿಲುವು.

ಸಿ.ಪಿ.ಐ. (ಎಂ) ಹಾಗೂ ಅದರ ಎಡ-ಪ್ರಜಾಪ್ರಭುತ್ವವಾದೀ ಮಿತ್ರರು ಅಸ್ಸಾಂನ ಈ ಚಳವಳಿಯಲ್ಲಿಯೂ ಭಾರತದ ಇತರ ಪ್ರದೇಶಗಳಲ್ಲಿ ನಡೆಯುತ್ತಿರುವಂತೆ ಅಸ್ಥಿರತೆಯುಂಟುಮಾಡುವ ಶಕ್ತಿಗಳು ಕಾರ್ಯನಿರತವಾಗಿರುವುದನ್ನು ಕಾಣುತ್ತದೆ. ಈ ಶಕ್ತಿಗಳ ಸೃಷ್ಟಿಯಲ್ಲಿ ಹಾಗೂ ಚಟುವಟಿಕೆಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ ಮಹತ್ವದ ಪಾತ್ರವಹಿಸುತ್ತಿದೆ.

ಅಸ್ಸಾಂನ ಈ ದಾರಿಗಾಣದ ಸಮಸ್ಯೆಗೆ ಒಂದು ಪರಿಹಾರ ಕಂಡು ಹಿಡಿಯುವ ಪ್ರಯತ್ನದಲ್ಲಿ ಸಿ. ಪಿ. ಐ. (ಎಂ) ಹಾಗೂ ಇತರ ವಿರೋಧ ಪಕ್ಷಗಳು ಕೇಂದ್ರ ಸರಕಾರದೊಂದಿಗೆ ಸಹಕರಿಸಿದವು. ಸರಕಾರ ಹಾಗೂ ಅಸ್ಸಾಂ ಚಳವಳಿಗಾರರ ಪ್ರತಿನಿಧಿಗಳೊಂದಿಗೆ ವಿರೋಧ ಪಕ್ಷಗಳು ಭಾಗವಹಿಸಿದ ಸಭೆಗಳಲ್ಲಿ ಅಸ್ಸಾಂನ ಜನಾಂಗೀಯ, ಭಾಷಾ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಗಣನೆಗೆ ತಗೊಳ್ಳದ ಯಾವುದೇ ಪರಿಹಾರ ದೀರ್ಘಕಾಲ ಉಳಿಯಲಾರದು. ಅಥವಾ ಯಾವುದೇ ರೀತಿಯಲ್ಲಿ ಸಹಾಯಕವಾಗಲಾರದು ಎಂಬ ಅಂಶವನ್ನು ಒತ್ತಿ ಹೇಳುತ್ತಿತ್ತು.

ಬಹಿಷ್ಕಾರ-ಪ್ರತ್ಯೇಕತೆಗೆ ಬೆಂಬಲ

ಚುನಾವಣಾ ಬಹಿಷ್ಕಾರಕ್ಕೆ ಕರೆಕೊಟ್ಟಿರುವ ಪಕ್ಷಗಳು ಆ ಮೂಲಕ ವಾಸ್ತವವಾಗಿ ಅಸ್ಸಾಂನ ಪ್ರತ್ಯೇಕತಾವಾದೀ ಚಳವಳಿಗೆ ತಮ್ಮ ಪೂರ್ಣ ಬೆಂಬಲ, ಸಹಕಾರ ನೀಡಿದಂತಾಗುತ್ತದೆ ಎಂದು ಆ ಪಕ್ಷಗಳಿಗೆ ಸಿ.ಪಿ.ಐ. (ಎಂ) ಎಚ್ಚರ ನೀಡುತ್ತದೆ. ಈಶಾನ್ಯ ಭಾರತದ ವಿವಿಧ ರಾಜ್ಯಗಳಲ್ಲಿ ಭಾರತದಿಂದ ಬೇರೆಯಾಗಲು ನಡೆಯುತ್ತಿರುವ ದಂಗೆಕೋರ ಚಟುವಟಿಕೆಗಳ ಅವಿಭಾಜ್ಯ ಅಂಗ ಈ ಚಳವಳಿ ಎಂಬುದು ಸುಸ್ಪಷ್ಟ. ಅದೇ ರೀತಿ ದೇಶವನ್ನು ವಿಚ್ಛಿನ್ನಗೊಳಿಸುವ ದುರುದ್ದೇಶದ ಅಂಗವಾಗಿ ದೇಶದಲ್ಲಿ ನಡೆಯುತ್ತಿರುವ ಈ ಎಲ್ಲಾ ಪ್ರತ್ಯೇಕತಾವಾದೀ ಚಳವಳಿಗಳಿಗೆ ಅಮೇರಿಕನ್ ಸಾಮ್ರಾಜ್ಯಶಾಹಿ ಬೆಂಬಲ ನೀಡುತ್ತಿದೆಯೆಂಬುದೂ ರಾಜಕೀಯ ಜ್ಞಾನವುಳ್ಳ ಎಲ್ಲರಿಗೂ ತಿಳಿದಿದೆ. ಈ ವಾಸ್ತವತೆಯನ್ನು ಉಪೇಕ್ಷಿಸುವ ಯಾವುದೇ ಪಕ್ಷ ನಿಜವಾಗಿ ಈ ಸಾಮ್ರಾಜ್ಯಶಾಹೀ ಸಂಚಿಗೆ ಬಲಿಯಾದಂತೆಯೇ. ಅಸ್ಸಾಂನಲ್ಲಿನ ವಿದೇಶೀಯರೆಂದು ಕರೆಸಿಕೊಳ್ಳುವವರ ವಿರುದ್ಧ ನಡೆಯುತ್ತಿರುವ ಚಳವಳಿಯ ಸಂದರ್ಭದಲ್ಲಿ ಕೊಟ್ಟಂತೆ ಆ ಪಕ್ಷಗಳು ತಮ್ಮ ಬೆಂಬಲಕ್ಕೆ ಯಾವುದೇ ಕಾರಣ ಕೊಟ್ಟರೂ ಈ ವಾಸ್ತವತೆ ಬದಲಾಗದು.

ಮುಂಬರುವ ಅಸ್ಸಾಂ ಚುನಾವಣೆಗಳನ್ನು ಬಹಿಷ್ಕರಿಸುವ ತಮ್ಮ ನಿರ್ಧಾರವನ್ನು ಪರಿಷ್ಕರಿಸಬೇಕೆಂದು ಈ ಎಲ್ಲಾ ಪಕ್ಷಗಳು ಹಾಗೂ ಅವರ ನಾಯಕರಲ್ಲಿ ನಾವು ಮನವಿ ಮಾಡಿಕೊಳ್ಳುತ್ತೇವೆ. ಆ ಮೂಲಕ ಅಸ್ಸಾಂನಲ್ಲಿ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆ ನಡೆಯುವಂತಾಗಲು, ಕಾಂಗ್ರೆಸ್ (ಐ)ನ ಸಂಚಿನ ವಿರುದ್ಧ ಹೋರಾಡುವಲ್ಲಿ ಹಾಗೂ ಹೆಚ್ಚುತ್ತಿರುವ ಪ್ರತ್ಯೇಕತಾವಾದಿ ಮತ್ತು ರಾಷ್ಟ್ರೀಯ ವಿಘಟನೆಯ ಅಪಾಯವನ್ನು ಎದುರಿಸುವಲ್ಲಿ ಇತರ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳ ಜತೆಗೂಡಬೇಕು.

ಸಮಸ್ಯೆಗಳಿಗೆ ನಿಜವಾದ ಪರಿಹಾರ

ಆಳುವ ಕಾಂಗ್ರೆಸ್ (ಐ)ನ್ನು ಸೋಲಿಸಲು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಆಟವನ್ನು ವಿಫಲಗೊಳಿಸಲು ಮತ್ತು ಈಗಿನ ಅಸ್ಸಾಂನಲ್ಲಿ ಜೀವಿಸುತ್ತಿರುವ ಎಲ್ಲಾ ಆರೋಗ್ಯಕರ ಶಕ್ತಿಗಳನ್ನು ಭಾರತ ಸಂಘದ ಐಕ್ಯ ಹಾಗೂ ಸಮಗ್ರತೆಗಾಗಿ ಮತ್ತು ಅಸ್ಸಾಂನ ಎಲ್ಲಾ ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಒಟ್ಟುಗೂಡಿಸಲು ಸಿ.ಪಿ.ಐ (ಎಂ) ತನ್ನ ಎಡ ಹಾಗೂ ಪ್ರಜಾಪ್ರಭುತ್ವವಾದೀ ಮಿತ್ರರೊಂದಿಗೆ ಮುಂಬರುವ ಚುನಾವಣೆಗಳಲ್ಲಿ ಭಾಗವಹಿಸುತ್ತದೆ.

ಕೇಂದ್ರದಲ್ಲಿರುವ ಕಾಂಗ್ರೆಸ್ (ಐ) ಸರಕಾರ ಪ್ರತ್ಯೇಕತಾವಾದೀ ಚಳವಳಿಗಾರರ ಹಿಂಸಾಚಾರದ ವಿರುದ್ಧ ರಕ್ಷಣೆಯ ವ್ಯವಸ್ಥೆ ಮಾಡಿ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆ ನಡೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಸಿ.ಪಿ.ಐ. (ಎಂ) ಒತ್ತಾಯಿಸುತ್ತದೆ. ರಾಜ್ಯದ ಆಡಳಿತ ಯಂತ್ರವನ್ನು ತನ್ನ ಸ್ವಾರ್ಥಪರ ಹಿತಗಳಿಗಾಗಿ ಹಾಗೂ ರಾಷ್ಟ್ರೀಯ ಸಮಗ್ರತೆಗಾಗಿ ನಿಜವಾದ ಹೋರಾಟ ನಡೆಸುತ್ತಿರುವ ಏಕಮಾತ್ರ ಶಕ್ತಿಯಾದ ಎಡ-ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ಭೇದಭಾವ ತೋರ್ಪಡಿಸಲು ಉಪಯೋಗಿಸುವ ಧೋರಣೆಯನ್ನು ಬಿಟ್ಟುಬಿಡಬೇಕೆಂದೂ ಅದು ಒತ್ತಾಯಿಸುತ್ತದೆ.

ಅಸ್ಸಾಂನ ಎಲ್ಲಾ ಪ್ರಗತಿಪರ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು ದೇಶದ ಇತರ ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳೊಂದಿಗೆ ಸೇರಿಕೊಳ್ಳಬೇಕೆಂದು ಸಿ.ಪಿ.ಐ. (ಎಂ) ಮನವಿ ಮಾಡುತ್ತದೆ ಈ ಶಕ್ತಿಗಳಿಗೆ ಮಾತ್ರ ಅಸ್ಸಾಮೀಯರ ಎಲ್ಲಾ ನ್ಯಾಯಬದ್ಧ ಬೇಡಿಕೆಗಳನ್ನು ಪೂರೈಸಲು ಹಾಗೂ ಅವರ ನಿಜವಾದ ತೊಂದರೆಗಳು ನಿವಾರಣೆಯಾಗುವಂತೆ ಮಾಡಲು ಸಾಧ್ಯವಿರುವುದು. ಜನತಾ ಪಕ್ಷ, ಬಿ.ಜೆ.ಪಿ. ಹಾಗೂ ಲೋಕದಳ ಅಸ್ಸಾಂನಲ್ಲಿನ ಚುನಾವಣೆಗಳನ್ನು ಬಹಿಷ್ಕರಿಸಬೇಕೆಂಬ ತಮ್ಮ ಘೋಷಿತ ಮಾರ್ಗವನ್ನು ಬಿಟ್ಟುಬಿಡಬೇಕೆಂದು ಸಿ.ಪಿ.ಐ. (ಎಂ) ಕರೆ ನೀಡುತ್ತದೆ. ಯಾಕೆಂದರೆ ಅವರ ಈ ಮಾರ್ಗ ನಮ್ಮ ರಾಷ್ಟ್ರೀಯ ಶತ್ರುಗಳಿಗೆ ಸಂತಸ ನೀಡಿ, ದೇಶದ ಎಲ್ಲಾ ಪ್ರಜಾಪ್ರಭುತ್ವವಾದೀ ಹಾಗೂ ದೇಶಪ್ರೇಮೀ ಶಕ್ತಿಗಳಿಗೆ ನೋವನ್ನುಂಟುಮಾಡುತ್ತದೆ.

17 ಜನವರಿ 1983

●

ಬಿಜಾಪುರ :

ಮುಗ್ಧ ರೈತರ ಮೇಲೆ ಪೋಲೀಸ್ ದೌರ್ಜನ್ಯ

ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ, ಬಿಜಾಪುರ ಜಿಲ್ಲಾ ಸಮಿತಿಯ ಅಧ್ಯಕ್ಷ ಭೀಮ್‌ಸಿ ಖಲಾದಗಿ ಈ ಕೆಳಕಂಡ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.

ಬಿಜಾಪುರದ ರೂರಲ್ ಸಬ್-ಇನ್ಸ್‌ಪೆಕ್ಟರ್ ಸಾವಂತ್‌ರವರು ಮುಗ್ಧ ನಿರಪರಾಧಿ ಬಡ ರೈತರ ಮೇಲೆ ಅನೇಕ ರೀತಿಯ ದೌರ್ಜನ್ಯ ನಡೆಸಿದ್ದಾರೆ. ಇವರು ಶ್ರೀಮಂತ ರೈತರ ಕೂಲಿ ಆಳಾಗಿ ಅವರು ಹೇಳಿದ ರೀತಿ ಬಡ ರೈತರ ಮೇಲೆ ಸುಳ್ಳು ಕೇಸುಗಳನ್ನು

(8ನೇ ಪುಟ ನೋಡಿ)

ರಾವ್ ಇನ್ಸುಲೇಟಿಂಗ್ ಕಾರ್ಖಾನೆಯಲ್ಲಿ

ಹಿಂಸಾಚಾರ ನಡೆಯಲು ಮಾಲೀಕರೇ ಕಾರಣ

ಈ ಕಾರ್ಖಾನೆಯಲ್ಲಿ 1982ರ ಮೇ ತಿಂಗಳಿನಲ್ಲಿ ಸಿ. ಐ. ಟಿ. ಯು. ಕಾರ್ಮಿಕ ಸಂಘ ಪ್ರಾರಂಭವಾಗಿದ್ದನ್ನು ಸಹಿಸದೆ ಅಲ್ಲಿನ ಮಾಲೀಕರು ಸಂಘವನ್ನು ಮುರಿಯುವ ಪ್ರಯತ್ನ ಮಾಡಿದರು. ಆದರೆ ಮಾಲೀಕರು ಸಫಲರಾಗಲಿಲ್ಲ. ಕೊನೆಗೆ ಬೀಗ ಮುದ್ರೆ ಘೋಷಿಸಿ ಕಾರ್ಖಾನೆಯನ್ನು ಮುಚ್ಚುವ ನಾಟಕ ಆಡಿದರು. ಹೀಗೆ ಸುಮಾರು 4 ತಿಂಗಳು ಕಾಡಿಸಿದರು. ಆದರೆ ಕಾರ್ಮಿಕ ಸಂಘ ಮುರಿಯಲು ಸಾಧ್ಯವಾಗದೆ ಪುನಃ ತೆಗೆಯಬೇಕಾಯಿತು.

ಹೀಗಾಗಿ ಮಾಲೀಕರು ಮತ್ತು ಕಾರ್ಮಿಕರೊಡನೆ ಒಂದು ಒಪ್ಪಂದ ಆದ ಮೇಲೆ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಿದರು. ಈ ಒಪ್ಪಂದದ ಪ್ರಕಾರ ಮಾಲೀಕರು ನಮ್ಮ ಎಲ್ಲಾ ಕಾರ್ಮಿಕರನ್ನು ತೆಗೆದುಕೊಂಡ ಮೇಲೆ ಹೊರಗಿನ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಮಾತು ಕೊಟ್ಟಿದ್ದರು. ಆದರೆ ಸಂಘವನ್ನು ಮುರಿಯುವ ಉದ್ದೇಶದಿಂದ ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳಲು ಪ್ರಾರಂಭಿಸಿದರು. ಆದರೆ ಕೇವಲ 123 ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು.

ಇದರ ಬಗ್ಗೆ ಲೇಬರ್ ಕಮಿಷನರ್‌ರವರಿಗೆ ದೂರಿತ್ತ ಮೇಲೆ ಉಳಿದ 136 ಕಾರ್ಮಿಕರಲ್ಲಿ 17-1-1983 ರೊಳಗೆ ಮತ್ತೆ 50 ಕೆಲಸಗಾರರನ್ನು ತೆಗೆದುಕೊಳ್ಳುವುದಾಗಿ ಮಾತು ಕೊಟ್ಟರು. ಆದರೆ 19-1-1983 ರಂದು ನಡೆದ ಮೀಟಿಂಗಿನಲ್ಲಿ (ಲೇಬರ್ ಕಮಿಷನರ್ ಎದುರು) ಕೊಟ್ಟ ಮಾತನ್ನು ಈಡೇರಿಸುವುದಿಲ್ಲ ಎಂದು ತಿಳಿಸಿದರು. ಇದಲ್ಲದೆ ಆಂಧ್ರ ಮತ್ತು ಇತರ ಕಡೆಯಿಂದ ಸುಮಾರು 100 ಕ್ಕಿಂತ ಹೆಚ್ಚಾಗಿ ಗುಂಡಾಗಳನ್ನು 20-1-83 ರಿಂದ ಕಾರ್ಖಾನೆಯ ಒಳಗೆ ತಂದಿಟ್ಟು ನಮ್ಮ ಸಂಘದ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಲು ಪ್ರಾರಂಭಿಸಿದರು.

ಈ ಮೇಲ್ಕಂಡ ಮಾಲೀಕರ ವರ್ತನೆ ಇಡೀ ಪ್ರದೇಶದಲ್ಲೆಲ್ಲಾ ಹರಡಿತು. 21-1-1983 ರಂದು ಬೆಳಗ್ಗೆ ನಮ್ಮ ಸಂಘದ ಕೇವಲ 50 ಮಂದಿ ಕಾರ್ಮಿಕರು ಕಾರ್ಖಾನೆಯ ಎದುರು ಶಾಂತಿಯುತವಾಗಿ ಘೋಷಣೆ ಕೂಗುವ ಸಮಯದಲ್ಲಿ ನಮ್ಮ ಸಿ.ಐ.ಟಿ.ಯು. ಕಾರ್ಯಕರ್ತ ಎಸ್. ಸಿ. ಪತ್ರಿಯವರಿಗೆ ರಾವ್ ಇನ್ಸುಲೇಟಿಂಗ್ ಕಾರ್ಖಾನೆಯಲ್ಲಿ ತಂದು ಇಟ್ಟುಕೊಂಡಿದ್ದ ಗೂಂಡಾ ವ್ಯಕ್ತಿಯಾದ ವಾಚ್‌ಮ್ಯಾನ್‌ನಿಂದ ಬಲವಾದ ಭರ್ಜಿ ಇರಿತ ಬಿದ್ದು ಎಸ್. ಸಿ. ಪತ್ರಿಯವರು ಪ್ರಜ್ಞಾ ಶೂನ್ಯರಾದರು. ಇವರನ್ನು ಬೆಳಗ್ಗೆ 9-30ಕ್ಕೆ ಬೌರಿಂಗ್ ಆಸ್ಪತ್ರೆಗೆ ಕಾರ್ಮಿಕರೇ ಕರೆದುಕೊಂಡು ಹೋಗಿ ಸೇರಿಸಿದರು. ಇವರ ಸ್ಥಿತಿ ಅಪಾಯಕಾರಿಯಾಗಿದೆ. ಇದಲ್ಲದೆ ನಮ್ಮ ಸಂಘದ ಸುಮಾರು 22 ಕಾರ್ಮಿಕರ ಮೇಲೆ ಮಾಲೀಕರ ಗೂಂಡಾಗಳು ಬೆಳಗ್ಗೆ 9 ಗಂಟೆಯಲ್ಲಿ ಧಾಳಿ ಮಾಡಿ ಗಾಯಗೊಳಿಸಿದರು.

ಮೇಲಿನ ಘಟನೆಗಳು ಇಡೀ ಪ್ರದೇಶಕ್ಕೆ ಆವರಿಸಿತು. ರಾವ್ ಇನ್ಸುಲೇಟಿಂಗ್ ಮಾಲೀಕರು ತಂದಿದ್ದ ಗೂಂಡಾಗಳು ಕಂಟ್ರಾಕ್ಟ್‌ಗೆ ನಡೆಸಲು ಕೊಟ್ಟಿದ್ದ 'ಮತ್ತೊಂದು ಕಾರ್ಖಾನೆಯೊಳಕ್ಕೆ ನುಗ್ಗಿ ಧಾಳಿ ಮಾಡಿದರು. ಇದರಲ್ಲಿ ಕಾರ್ಮಿಕರ ಪಾತ್ರ ಸ್ವಲ್ಪವೂ ಇಲ್ಲ. ಕೇವಲ ಮಾಲೀಕರ ಗೂಂಡಾಗಳು ಮತ್ತು ಸಮಾಜ ಘಾತುಕರು ಈ ಘಟನೆಗೆ ಕಾರಣರಾಗಿದ್ದು, ಸಿ. ಐ. ಟಿ. ಯು ಹೆಸರನ್ನು ಕೆಡಿಸಲು ಪ್ರಯತ್ನ ಪಟ್ಟಿರುತ್ತಾರೆ.

ಎಸ್. ಸಿ. ಪತ್ರಿ ಮತ್ತು ಇತರ ಕಾರ್ಮಿಕರನ್ನು ಮಾಲೀಕರ ಗೂಂಡಾಗಳು ಗಾಯಗೊಳಿಸಿರುವ ಬಗ್ಗೆ ಪೋಲೀಸಿನವರಿಗೆ ಲಿಖಿತ ದೂರನ್ನು ನಾವು ಕೊಟ್ಟಿರುತ್ತೇವೆ.

ಸಂಘದ ಮುಖಂಡರಾದ ಟಿ. ಎಸ್. ಅನಂತರಾಂ ಮತ್ತು ವಿ. ಜೆ. ಕೆ. ನಾಯರ್‌ರವರು ಕಾರ್ಮಿಕ ಕಮಿಷನರ್‌ರವರೊಡನೆ ಮಾತುಕತೆ ಆಡಿ ಸಮಸ್ಯೆಯನ್ನು ಬಗೆಹರಿಸಿದರಲ್ಲದೆ ಆಗಬಹುದಾದ ಅನಾಹುತಗಳನ್ನು ತಡೆಗಟ್ಟಿರುತ್ತಾರೆ. ಕೊನೆಗೆ ಮಾಲೀಕರು ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಒಪ್ಪಿಕೊಂಡರು. ಈ ಕೆಲಸವನ್ನು ಮಾಲೀಕರು ಕೊಟ್ಟ ಮಾತಿನಂತೆ ಮೊದಲೆ ಮಾಡಿದ್ದರೆ ಆಗಬಹುದಾದ ಅನಾಹುತವನ್ನು ಅವರು ತಪ್ಪಿಸಬಹುದಿತ್ತು. ಆದ್ದರಿಂದ ಆದಿನ ನಡೆದ ಘಟನೆಗೆ ಮಾಲೀಕರೆ ಕಾರಣ. ಸಿ.ಐ.ಟಿ.ಯು. ಸಂಘ ಯಾವಾಗಲು ಶಾಂತಿ ಮತ್ತು ಕಾನೂನಿನ ರೀತಿ ಹೋರಾಟ ನಡೆಸುತ್ತದೆ. ಮಾಲೀಕರು ಮಾಡಿಕೊಂಡ ಅನಾಹುತಕ್ಕೆ ಕಾರ್ಮಿಕ ಸಂಘ ಕಳಕಳಿ ವ್ಯಕ್ತಪಡಿಸುತ್ತದೆ. ಆದರೆ ಇಂದು ಅನೇಕ ತಪ್ಪಿತಸ್ಥರಲ್ಲದ ಕಾರ್ಮಿಕರನ್ನು ಪೋಲೀಸಿನವರು ಬಂಧಿಸುತ್ತಿರುವುದು ಸರಿ ಅಲ್ಲ.

[ಈ ಪತ್ರಿಕಾ ಹೇಳಿಕೆಯನ್ನು ರಾವ್ ಇನ್ಸುಲೇಟಿಂಗ್ ಕಾರ್ಖಾನೆಯ ಕಾರ್ಮಿಕರ ಸಂಘದ ಅಧ್ಯಕ್ಷ ಹಾಗೂ ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ| ಟಿ.ಎಸ್. ಅನಂತರಾಮ್ ನೀಡಿರುತ್ತಾರೆ]

ಬೆಂಗಳೂರು :

ಎಸ್. ಎಫ್. ಐ. ಆಶ್ರಯದಲ್ಲಿ ಅಂತರ ಕಾಲೇಜು ಸ್ಪರ್ಧೆಗಳು

ಬೆಂಗಳೂರು ವಿಶ್ವವಿದ್ಯಾಲಯ ಮಟ್ಟದ ಕಾಂ| ಲಾಲ್‌ಬಹದ್ದೂರ್ ರಾಯ್ ಮತ್ತು ಕಾಂ| ಚಂದ್ರಶೇಖರ್ ಸ್ಮಾರಕ ದ್ವಿತೀಯ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ ಮತ್ತು ಭಾಷಣ ಸ್ಪರ್ಧೆಯನ್ನು ದಿನಾಂಕ 21-1-83 ರಂದು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಎಸ್.ಎಫ್.ಐ. ಬೆಂಗಳೂರು ನಗರ ಸಮಿತಿಯ ಆಶ್ರಯದಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಮೊದಲಿಗೆ ನಗರ ಸಮಿತಿ ಕಾರ್ಯದರ್ಶಿ ಜಿ. ಎನ್ ಮೋಹನ್‌ರವರು ಸ್ವಾಗತಿಸಿದರು. ಉದ್ಘಾಟನೆ ಮಾಡಿದ ಕಾಂ| ಜಿ. ವಿ. ಶ್ರೀರಾಂರೆಡ್ಡಿಯವರು ಮಾತನಾಡುತ್ತಾ, ಪ್ರಸ್ತುತ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ವಿಶ್ಲೇಷಿಸಿದರು. ಚರ್ಚಾ ಸ್ಪರ್ಧೆಗೆ 9 ಕಾಲೇಜಿನ 18 ಪ್ರತಿನಿಧಿಗಳೂ ಮತ್ತು ಭಾಷಣ ಸ್ಪರ್ಧೆಗೆ 26 ಸ್ಪರ್ಧಿಗಳೂ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಜಾವಾಣಿಯ ಉಪ ಸಂಪಾದಕರಾದ ಶ್ರೀ ರಮಜಾನ ದರ್ಗಾರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರಜಾಶಾಹಿ ವ್ಯವಸ್ಥೆಯ ಅವಿಭಾಜ್ಯ ಅಂಗವಾದ ವಿದ್ಯಾರ್ಥಿಗಳು ಸಂಘಟಿತರಾಗಿ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕಾದ ಅನಿವಾರ್ಯತೆಯನ್ನು ತಿಳಿಸಿ ರಾಜಕೀಯದಿಂದ ವಿದ್ಯಾರ್ಥಿಗಳು ದೂರವಿರಬೇಕೆಂಬ ಪೊಳ್ಳು ಘೋಷಣೆಯನ್ನು ಖಂಡಿಸಿ ವಿದ್ಯಾರ್ಥಿಗಳಿಗೆ ರಾಜಕೀಯದ ಅಗತ್ಯತೆಯನ್ನು ಕುರಿತು ಹೇಳಿದರು.

ಲಾಲ್‌ಬಹದ್ದೂರ್‌ರಾಯ್ ಚರ್ಚಾ ಸ್ಪರ್ಧೆಯ ಪಾರಿತೋಷಕವನ್ನು ವಿ ವಿ. ಪುರಂ ವಿಜ್ಞಾನ ಕಾಲೇಜಿನವರು, ಚಂದ್ರಶೇಖರ್ ಸ್ಮಾರಕ ಭಾಷಣ ಸ್ಪರ್ಧೆಯ ಪಾರಿತೋಷಕವನ್ನು ಯು ವಿ.ಸಿ.ಇ. ಕಾಲೇಜಿನವರು ಹಂಚಿಕೊಂಡರು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಗಾಯತ್ರಿ, ಕಾಂ| ಉದಯಕುಮಾರ್, ಶಿವಮಲ್ಲುರವರು ಆಗಮಿಸಿದ್ದರು.

ಎಸ್. ಎಫ್. ಐ. ಸಾಂಸ್ಕೃತಿಕ ತಂಡದ ಹೋರಾಟದ ಹಾಡುಗಳ ಕಾರ್ಯಕ್ರಮದ ನಂತರ ಎಸ್. ಎಫ್. ಐ. ವಿದ್ಯಾರ್ಥಿನಿಯರ ಉಪಸಮಿತಿಯ ಕಾಂ| ತೇಜಸ್ವಿನಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಎಸ್. ಎಫ್. ಐ. ಬಳ್ಳಾರಿ ಜಿಲ್ಲಾ ಪ್ರಥಮ ಸಮ್ಮೇಳನ, ಬೆಳವಣಿಗೆಯ ಒಂದು ದಿಟ್ಟ ಹೆಜ್ಜೆ

ಕೇವಲ ಎರಡು ವರ್ಷಗಳ ಹಿಂದೆ ಹೊಸಪೇಟೆಯಿಂದ ಪ್ರಾರಂಭವಾದ ಎಸ್.ಎಫ್.ಐ. ಸಂಘಟನೆಯು ಇಂದು ಬಳ್ಳಾರಿ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳಿಗೆ ವಿಸ್ತರಿಸಿದ್ದು ಜಿಲ್ಲೆಯ ಅತ್ಯಂತ ಬಲಿಷ್ಟ ವಿದ್ಯಾರ್ಥಿ ಸಂಘಟನೆಯಾಗಿ ರೂಪುಗೊಂಡಿದೆ. ಕಳೆದೆರಡು ವರ್ಷಗಳ ಅವಧಿಯಲ್ಲಿ ಎಸ್. ಎಫ್. ಐ. ನಡೆಸಿದ ಚಟುವಟಿಕೆ, ಹೋರಾಟಗಳ ಬಗ್ಗೆ ವಿಮರ್ಶಿಸಲು, ಇದುವರೆಗಿನ ಅನುಭವದ ಹಿನ್ನಲೆಯಲ್ಲಿ ಸಂಘಟನೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಮತ್ತಷ್ಟು ಮುನ್ನಡೆಸುವಲ್ಲಿ 1983ರ ಜನವರಿ 9, 10 ರಂದು ಹರಪನಹಳ್ಳಿಯಲ್ಲಿ ಜರುಗಿದ ಬಳ್ಳಾರಿ ಜಿಲ್ಲಾ ಪ್ರಥಮ ಸಮ್ಮೇಳನವು ಬೆಳವಣಿಗೆಯ ಒಂದು ಮೈಲಿಗಲ್ಲಾಗಿದೆ.

ಉದ್ಘಾಟನಾ ಸಮಾರಂಭ

'ಕಾಮ್ರೇಡ್ ಭಾರತಿ ಚಿರಾಯುವಾಗಲಿ', 'ಸ್ವಾತಂತ್ರ್ಯ - ಪ್ರಜಾಪ್ರಭುತ್ವ-ಸಮಾಜವಾದ ಚಿರಾಯುವಾಗಲಿ,' 'ಭಾರತ ವಿದ್ಯಾರ್ಥಿ ಫೆಡರೇಷನ್ ಚಿರಾಯುವಾಗಲಿ' ಎಂಬ ಘೋಷಣೆಗಳೊಂದಿಗೆ ಎಸ್.ಎಫ್.ಐ ನ ಧ್ವಜಾರೋಹಣವು ನೆರವೇರಿತು. ಹೊಸಪೇಟೆಯಲ್ಲಿ ವಿಜಯನಗರ ಕಾಲೇಜಿನ ಕೆಲವೊಂದು ಅವ್ಯವಹಾರಗಳನ್ನು ಬಯಲಿಗೆಳೆಯುವ ಪ್ರಯತ್ನವಾಗಿ ವಿದ್ಯಾರ್ಥಿಗಳ ಮಧ್ಯೆ ಕೇವಲ ಕರಪತ್ರಗಳನ್ನು ಹಂಚಿದ್ದಕ್ಕಾಗಿ ಎಸ್. ಎಫ್. ಐ. ಸ್ಥಾಪನೆಯ ದಿನಗಳಲ್ಲೇ ಪೋಲೀಸರ ದೌರ್ಜನ್ಯವನ್ನು ಎದುರಿಸಿ ನಿಂತ ಸಂಗಾತಿಗಳಲ್ಲಿ ಒಬ್ಬರಾದ ಕಾಮ್ರೇಡ್ ಹುಸೇನ್ ಸಾಬ್ ಧ್ವಜಾರೋಹಣ ಮಾಡಿದರು. ಅಂದಿನಿಂದ ಇಂದಿನವರೆಗೂ ಬಳ್ಳಾರಿ ಜಿಲ್ಲೆಯಲ್ಲಿ ಎಸ್. ಎಫ್.ಐ. ಕಾರ್ಯಕರ್ತರು ಪೋಲೀಸರಿಂದ ಸತತ ದೌರ್ಜನ್ಯವನ್ನು ಧೈರ್ಯದಿಂದ ಎದುರಿಸುತ್ತಾ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದಾರೆ.

ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ಇತ್ತೀಚಿಗೆ ದುಷ್ಕರ್ಮಿಗಳ ಧಾಳಿಗೆ ತುತ್ತಾಗಿ ತನ್ನ ತಂದೆ-ತಾಯಿಯವರೊಂದಿಗೆ ತಾನೂ ಬಲಿಯಾದ ಎಸ್. ಎಫ್. ಐ ನ ಸಕ್ರಿಯ ನಾಯಕಿಯಾಗಿದ್ದ ಕಾಮ್ರೇಡ್ ಭಾರತಿಯವರ ಚಿರ ನೆನಪಿಗಾಗಿ ಕರ್ನಾಟಕದ ಗಡಿ ಜಿಲ್ಲೆಯಾದ ಬಳ್ಳಾರಿ ಜಿಲ್ಲಾ ಸಮ್ಮೇಳನದ ಸ್ಥಳಕ್ಕೆ 'ಭಾರತಿ ನಗರ'ವೆಂದು ಹೆಸರಿಡಲಾಗಿತ್ತು.

ಧ್ವಜಾರೋಹಣದ ನಂತರ ಪ್ರಾರಂಭವಾದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹರಪನಹಳ್ಳಿಯ ಇಂಗ್ಲೀಷ್ ಪ್ರಾಧ್ಯಾಪಕರಾದ ಗುಡಿಹಳ್ಳಿ ನಾಗರಾಜ್ ವಹಿಸಿದ್ದರು. ಖಾಸಗಿ ಶಾಲಾ ಶಿಕ್ಷಕರ ಸಂಘದ ಬಳ್ಳಾರಿ ಜಿಲ್ಲಾ ಘಟಕ ಅಧ್ಯಕ್ಷರಾದ ಭೀಮಸೇನಾಚಾರ್ ಸಮ್ಮೇಳನವನ್ನು ಉದ್ಘಾಟಿಸಿದರು. ಎಸ್.ಎಫ್.ಐ.ನ ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಆರಾಧ್ಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಎಸ್.ಎಫ್.ಐ. ಘೋಷಣೆಗಳ ಬಗ್ಗೆ ವಿವರಿಸಿದರು.

ಸಮಾರಂಭದ ಪ್ರಾರಂಭದಲ್ಲಿ ಕ್ರಾಂತಿ ಗೀತೆಗಳನ್ನು ಹಾಡಲಾಯಿತು. ಸಮ್ಮೇಳನಕ್ಕೆ ಶುಭಾಶಯ ಕೋರಿ ಸೌಹಾರ್ದ ಸಂಘಟನೆಗಳಿಂದ ಶುಭಾಶಯ ಕೋರಲಾಯಿತು.

ಪ್ರತಿನಿಧಿ ಅಧಿವೇಶನ

ಮಧ್ಯಾಹ್ನ ಪ್ರತಿನಿಧಿ ಅಧಿವೇಶನ ಪ್ರಾರಂಭವಾಯಿತು. ಕಾಮ್ರೇಡ್ ಗುರುಶಾಂತಪ್ಪ, ಮಹಬೂಬ್, ದೇವಪ್ಪ, ರಮೇಶ್ ಮತ್ತು ನಾಗರತ್ನ ರವರನ್ನೊಳಗೊಂಡ ಐದು ಮಂದಿ ಸದಸ್ಯರ ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ನಿರ್ಣಯ ಮಂಡಳಿ ಸಂಚಾಲಕರಾಗಿ ಕಾಮ್ರೇಡ್ ಬಸಪ್ಪ ಮತ್ತು ಪರಿಚಯ ಪರಿಶೀಲನಾ ಮಂಡಳಿ ಸಂಚಾಲಕರಾಗಿ ಕಾಮ್ರೇಡ್ ಅನ್ವರ್ ಪಾಷಾರವರನ್ನು ಆಯ್ಕೆ ಮಾಡಲಾಯಿತು.

1005 ಸದಸ್ಯರನ್ನು ಪ್ರತಿನಿಧಿಸಿ 75 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಇವರಲ್ಲಿ 8 ಮಂದಿ ವಿದ್ಯಾರ್ಥಿನಿಯರು, 10 ಮಂದಿ ಹೈಸ್ಕೂಲು ವಿದ್ಯಾರ್ಥಿಗಳು, 6 ಮಂದಿ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳು ಸೇರಿದ್ದಾರೆ. ಪ್ರತಿನಿಧಿಗಳಲ್ಲಿ ಅತ್ಯಂತ ಕಿರಿಯವರು ಸಂಗಾತಿ ಸುವರ್ಣ (13 ವರ್ಷ), ಅತ್ಯಂತ ಹಿರಿಯ ಸಂಗಾತಿ 23 ವರ್ಷದ ಕಾಮ್ರೇಡ್ ಸಿದ್ಧಲಿಂಗಪ್ಪ. ಪ್ರತಿನಿಧಿಗಳಲ್ಲಿ 44 ಮಂದಿ ಚರ್ಚಾಪಟುಗಳು ಮತ್ತು ಕ್ರೀಡಾಪಟುಗಳು, 64 ಮಂದಿ ದಿನಪತ್ರಿಕೆ ಓದುವ ಅಭ್ಯಾಸವಿರುವವರು. ಸಂಗೀತ, ಕಲೆ, ನಾಟಕಗಳಲ್ಲಿ ಆಸಕ್ತಿ ಉಳ್ಳವರು 19 ಮಂದಿ. ಪ್ರತಿನಿಧಿಗಳ ಕುಟುಂಬಗಳಲ್ಲಿ 27 ಎಸ್. ಎಫ್.ಐ.ನ ಅಭಿಮಾನಿಗಳು.

(8ನೇ ಪುಟನೋಡಿ)

ಮತ್ತೊಮ್ಮೆ ಪ್ರತಿಜ್ಞೆಗೈಯೋಣ

ಮೂವತ್ತಮೂರು ವರ್ಷಗಳ ಹಿಂದೆ, ೧೯೫೦ರ ಜನವರಿ ೨೬ ರಂದು, ಭಾರತದ ಜನತೆಯ ಸಾರ್ವಭೌಮತ್ವವನ್ನು ಘೋಷಿಸಲು ನಾವು ಘನಗಾಂಭೀರ್ಯದಿಂದ ನಿರ್ಧರಿಸಿದೆವು. ಮತ್ತು ಭಾರತದ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು, ವಿಚಾರ, ಅಭಿವ್ಯಕ್ತಿ, ನಂಬಿಕೆ ಹಾಗೂ ಉಪಾಸನೆಯ ಸ್ವಾತಂತ್ರ್ಯವನ್ನು, ಸಮಾನಸ್ಥಾನಮಾನವನ್ನು, ಬಂಧುತ್ವವನ್ನು ಹಾಗೂ ಐಕ್ಯತೆಯನ್ನು ದೊರಕಿಸಿ ಕೊಡುವುದಾಗಿ ಭರವಸೆ ನೀಡಿದ್ದೆವು. ನಾವು ಬಯಸಿದ ಈ ಗುರಿಗಳಲ್ಲಿ ಕೆಲವು ಇನ್ನೂ ಸಾಧಿತವಾಗಬೇಕಷ್ಟೆ.

ಸರ್ವಾಧಿಕಾರ, ವಿಘಟನೆಯ ಅಪವಿತ್ರ ಶಕ್ತಿಗಳು, ಕೋಮುವಾದ ಮತ್ತು ಸಂಕುಚಿತವಾದ ಹಾಗೂ ಇತರ ನ್ಯೂನತೆಗಳು ಆಗಾಗ ನಮ್ಮ ಪ್ರಗತಿಗೆ ತಡೆಯೊಡ್ಡಿ, ನಮ್ಮ ನಿರ್ಧಾರ ಮತ್ತು ಸಾಧನೆಗಳ ನಡುವೆ ಅಂತರವುಂಟಾಗುವಂತೆ ಮಾಡಿವೆ.

ಇದೀಗ ಹೊಸದೊಂದು ಅರುಣೋದಯದ ಬೆಳಕಿನೆಡೆಗೆ ಜಾಗೃತಗೊಂಡು ಸಾಗುವ, ನಮ್ಮ ಗುರಿಗಳನ್ನು ಸಾಧಿಸಲು, ನಮ್ಮ ಕನಸುಗಳನ್ನು ನನಸಾಗಿಸಲು ಒಂದು ಹೊಸ ಹೋರಾಟಕ್ಕಾಗಿ ಹೃತ್ಪೂರ್ವಕ ನಿರ್ಧರಿಸುವ ಸಮಯ ಬಂದಿದೆ.

ನಮ್ಮ ಜನತೆಗೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯದ ಭರವಸೆಕೊಡುವ ಹೊಸ ಭಾರತವೊಂದರ ನಿರ್ಮಾಣದ ಪರಮಗುರಿಗೆ ತಮ್ಮನ್ನು ಮತ್ತೊಮ್ಮೆ ಮುಡಿಪಿಡುವ ಪ್ರತಿಜ್ಞೆಯನ್ನು ಪಶ್ಚಿಮ ಬಂಗಾಲದ ಜನತೆ ಕೈಗೊಳ್ಳಲಿ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ನಮ್ಮ ಜನತೆಯ ಐಕ್ಯತೆಯನ್ನು ಎತ್ತಿಹಿಡಿಯಲು ಮತ್ತು ಶೋಷಣೆ ಹಾಗೂ ಒಡಕುಂಟುಮಾಡುವ ಶಕ್ತಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರಿಸಿ ನಿಲ್ಲಲು ನಾವು ಮತ್ತೊಮ್ಮೆ ನಿರ್ಧರಿಸೋಣ. ತಮ್ಮ ಉದ್ದೇಶಗಳ ಸಾಧನೆಯ ಹೋರಾಟದಲ್ಲಿ ಜನತೆಗೆ ಬೆಂಬಲವಾಗಿ ನಿಲ್ಲಲು ಎಡರಂಗ ಸರಕಾರ ಬದ್ಧವಾಗಿದೆ.

೨೬ ಜನವರಿ, ೧೯೮೩

ಪಶ್ಚಿಮ ಬಂಗಾಲ ಸರಕಾರ

ಎಸ್. ಎಫ್. ಐ. ಬಳ್ಳಾರಿ ಜಿಲ್ಲಾ ಪ್ರಥಮ ಸಮ್ಮೇಳನ

(6ನೇ ಪುಟದಿಂದ)

ಜಿಲ್ಲಾ ಸಂಘಟನಾ ಸಮಿತಿಯ ಸಂಚಾಲಕ ಕಾಮ್ರೇಡ್ ಶಾಂತಕುಮಾರಿ ಮಂಡಿಸಿದ ಕರಡು ವರದಿಯ ಮೇಲೆ 19 ಮಂದಿ ಪ್ರತಿನಿಧಿಗಳು ಚರ್ಚಿಸಿದರು. ಹಿಂದಿನ ದಿನ ರಾತ್ರಿ ಪ್ರತಿನಿಧಿಗಳು ತಾಲ್ಲೂಕುವಾರು ಚರ್ಚೆ ನಡೆಸಿದ್ದರು. ಪ್ರತಿನಿಧಿಗಳ ಚರ್ಚೆಗೆ ನಂತರ ಉತ್ತರಿಸಲಾಯಿತು. ರಾಜ್ಯ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ಕೆ. ಬಸವರಾಜ್ ಎಸ್.ಎಫ್.ಐ.ನ ಧ್ಯೇಯೋದ್ದೇಶಗಳ ಬಗ್ಗೆ ವಿವರಿಸಿ ತಿಳಿಸಿದರು. ಜಿಲ್ಲೆಯ ಪ್ರಮುಖ ಶೈಕ್ಷಣಿಕ ಸಮಸ್ಯೆಗಳಿಗೆ ಸಂಬಂಧಿಸಿ 10 ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು. ಬಳ್ಳಾರಿಯ ವೀರಶೈವ ಕಾಲೇಜಿನ ಅವ್ಯವಹಾರದ ಬಗ್ಗೆ ತನಿಖೆಯು ಶೀಘ್ರವಾಗಿ ನಡೆಯಬೇಕು. ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆ ಕೂಡಲೇ ಆಗಬೇಕು, ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಡೊನೇಶನ್ ಫೀ ವಸೂಲಿ ರದ್ದಾಗಬೇಕು, ಶೈಕ್ಷಣಿಕವಾಗಿ ಹಿಂದುಳಿದಿರುವ ಬಳ್ಳಾರಿ ಜಿಲ್ಲೆಯ ಪ್ರತಿ ಹಳ್ಳಿಯಲ್ಲಿ ಶಾಲೆಗಳನ್ನು, ತಾಲ್ಲೂಕು ಕೇಂದ್ರಗಳಲ್ಲಿ ಪದವಿ ಕಾಲೇಜುಗಳನ್ನು, ಉಚಿತ ಹಾಸ್ಟೆಲ್‌ಗಳನ್ನು ಸ್ಥಾಪಿಸಬೇಕು, ಮುಂತಾದವು ಪ್ರಮುಖ ನಿರ್ಣಯಗಳು. 'ಜನತಾ ರಂಗ' ಸರ್ಕಾರವನ್ನು ಅಭಿನಂದಿಸಿ ರಾಜಕೀಯ ನಿರ್ಣಯವೊಂದನ್ನು ಸಹ ಅಂಗೀಕರಿಸಲಾಯಿತು.

ನೂತನ ಜಿಲ್ಲಾ ಸಮಿತಿಯ ರಚನೆ

11 ಮಂದಿಯ ಜಿಲ್ಲಾ ಸಮಿತಿಯನ್ನು ಸಮ್ಮೇಳನವು ಸರ್ವಾನುಮತದಿಂದ ಚುನಾಯಿಸಿತು. ಅಧ್ಯಕ್ಷರಾಗಿ ಕಾಂ॥ ಉಳ್ಳೇಶ್ವರ, ಉಪಾಧ್ಯಕ್ಷರಾಗಿ ಕಾಂ। ಪ್ರಸನ್ನಕುಮಾರ್, ಕಾರ್ಯದರ್ಶಿಯಾಗಿ ಕಾಂ। ಗುರುಶಾಂತಪ್ಪ ಮತ್ತು ಸಹ ಕಾರ್ಯದರ್ಶಿಯಾಗಿ ಕಾಂ। ಮೆಬಬೂಬ್ ಆಯ್ಕೆಯಾದರು. ಕಾಮ್ರೇಡ್ ದೇವಪ್ಪ, ಇಸ್ಮಾಯಿಲ್, ಈಶ್ವರಚಂದ್ರ, ಕೋದಂಡರಾಮು, ಸೋಮಪ್ಪ, ಶಾಂತಕುಮಾರಿ ಇವರು ಜಿಲ್ಲಾ ಸಮಿತಿ ಸದಸ್ಯರು.

ಮೆರವಣಿಗೆ, ಬಹಿರಂಗ ಸಭೆ

ದಿನಾಂಕ 10 ರಂದು ಸಂಜೆ ಭಾರತಿನಗರದಿಂದ ಸುಮಾರು 500 ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಹೊರಟು ಹರಪನಹಳ್ಳಿಯ ಮುಖ್ಯ ಬೀದಿಗಳಲ್ಲಿ ಸಾಗಿ ಹಳೇ ಬಸ್ ನಿಲ್ದಾಣದಲ್ಲಿ ಸೇರಿದರು. ಅಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಕೀಲರಾದ ಸಯ್ಯದ್ ಹುಸೇನ್ ವಹಿಸಿದ್ದರು. ಸ್ವಾಗತ ಸಮಿತಿಯ ಪರವಾಗಿ ಕಾಂ। ವೆಂಕಟೇಶ್ ಸ್ವಾಗತಿಸಿದರು. ಸಿಂಧನೂರಿನ ಕಾಂ। ಲಕ್ಷ್ಮಣ್ ಮತ್ತು ಹಡಗಲಿಯ ಕಾಂ। ಬಸಪ್ಪ ಮತ್ತು ತಂಡದವರು ಕ್ರಾಂತಿಗೀತೆಗಳನ್ನು ಹಾಡಿದರು. ಖಾಸಗಿ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಕೆ. ವಿ. ರಾಯಚೂರ್, ಎಸ್. ಎಫ್. ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ಕಾರ್ಯದರ್ಶಿ ಕೆ. ಬಸವರಾಜುರವರು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ। ಗುರುಶಾಂತಪ್ಪ ಸಮ್ಮೇಳನದ ನಿರ್ಣಯಗಳನ್ನು ವಿವರಿಸಿದರು. ಕಾಂ। ರಾಜಾಸಾಬ್ ವಂದನಾರ್ಪಣೆ ಮಾಡಿದರು. ಸಮ್ಮೇಳನದ ಹೊಸ ಅನುಭವ, ಸವಿನೆನಪುಗಳನ್ನು ಹೊತ್ತು ಪ್ರತಿನಿಧಿಗಳು ಹಿಂತಿರುಗಿದರು.

●

ಪೋಲೀಸ್ ದೌರ್ಜನ್ಯ

(5ನೇ ಪುಟದಿಂದ)

ಹಾಕಿ ಸ್ಟೇಷನ್‌ನಲ್ಲಿ, ದಿನಗಟ್ಟಲೆ ರೈತರುಗಳನ್ನು ಇಟ್ಟು, ಮನಸೇಚ್ಛೆ ಹೊಡೆದು ಚಿತ್ರಹಿಂಸೆ ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ರೈತರು ಮತ್ತು ರೈತ ಸಂಘದ ಮುಖಾಂತರ ಅನೇಕ ಭಾರಿ ಮೇಲಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ದೂರು ಸಲ್ಲಿಸಿದ್ದೇವು. ಕಾಂಗ್ರೆಸ್ (ಐ) ಜನವಿರೋಧಿ ಮಂತ್ರಿಗಳು ಈ ವಿಚಾರದಲ್ಲಿ ರೈತರಿಗೆ ಯಾವ ವಿಧವಾದ ರಕ್ಷಣೆಯನ್ನು ಕೊಡುವುದರ ಬದಲು ಇನ್ನು ಹೆಚ್ಚು ದೌರ್ಜನ್ಯ ನಡೆಸಲು ಈ ಅಧಿಕಾರಿಗೆ ಅವಕಾಶಮಾಡಿಕೊಟ್ಟರು ಈ ವಿಚಾರದಲ್ಲಿ ಬಿಜಾಪುರದ ರೈತ ಸಂಘದ ಆಶ್ರಯದಲ್ಲಿ ತಾ॥ 26-1-83 ರಂದು ಸತ್ಯಾಗ್ರಹ ನಡೆಸಲು ತೀರ್ಮಾನ ಮಾಡಿ ಈ ಕೂಡಲೇ ದೌರ್ಜನ್ಯವನ್ನು ನಿಲ್ಲಿಸಬೇಕು, ತಪ್ಪಿದಲ್ಲಿ ಸತ್ಯಾಗ್ರಹವನ್ನು ತಾಲ್ಲೂಕಿನಲ್ಲೆಲ್ಲ ನಡೆಸುವುದಾಗಿ ತಾ॥ 17-1-1983 ರಂದು ಜಿಲ್ಲಾ ಮತ್ತು ರಾಜ್ಯ ಪೋಲೀಸ್ ಅಧಿಕಾರಿಗಳಿಗೆ ಪತ್ರದ ಮುಖೇನ ತಿಳಿಸಿರುವೆವು.

ತಾ॥ 22-1-83ನೇ ಮಧ್ಯಾಹ್ನ 3 ಗಂಟೆಯಲ್ಲಿ ರಾಜ್ಯದ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಬೀಮ್‌ಸಿ ಖಲಾದಗಿ ಮತ್ತು ಎ. ಆರ್. ಅಡವೀಶ್‌ರವರು ಖುದ್ದು ಭೇಟಿಯಾಗಿ ಮನವಿಯನ್ನು ಸಲ್ಲಿಸಿ, ವಿಚಾರಗಳನ್ನೆಲ್ಲಾ ವಿವರವಾಗಿ ತಿಳಿಸಿದರು. ಡಿ.ಜಿ.ಪಿ.ರವರು ಮನವಿಯನ್ನು ಓದಿ ಈ ವಿಚಾರದಲ್ಲಿ ರಕ್ಷಣೆ ಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟು ಜಿಲ್ಲೆಯ ಪೋಲೀಸ್ ಅಧಿಕಾರಿಗಳಿಗೆ ತಕ್ಷಣ ಆದೇಶಕೊಟ್ಟಿದ್ದಾರೆ.

●

ಕರ್ನಾಟಕ ವಿಧಾನಸಭೆ: ಮೊದಲ ಅನುಭವಗಳು

(1ನೇ ಪುಟದಿಂದ)

ಆ ಶಾಸಕರು ಹಿಂದೆ ಆಡಳಿತದಲ್ಲಿ ಇದ್ದವರು ! ಜನವರಿ 9ನೇ ತಾರೀಖಿನವರೆಗೆ ಅಧಿಕಾರದಲ್ಲಿದ್ದವರು.... ನನಗೆ ಆಗ ಅನಿಸತೊಡಗಿತು. ಇದೆಂತಹ ಮಾತು ?.... ಹೌದು. ನೂರಾರು ಏಕೆ ಸಾವಿರಾರು ಹಳ್ಳಿಗಳಲ್ಲಿ ಕುಡಿಯಲು ಶುದ್ಧವಾದ ನೀರಿಲ್ಲ. ಅದಕ್ಕಾಗಿ ಚಳವಳಿ ಮಾಡುತ್ತಿದ್ದಾರೆ. ಅದರೆ ಶುದ್ಧವಾದ ಕುಡಿಯುವ ನೀರು ನಮ್ಮ ಜನತೆಗೆ ಇಲ್ಲದಿರುವುದು ಈ ನನ್ನ ಶಾಸಕ ಸಹೋದ್ಯೋಗಿಗೆ ಜನವರಿ 9 ರಿಂದ ಕಾಣಿಸತೊಡಗಿತೆ. ...ಅಥವ ವರ್ಷಗಳಿಂದಲೊ.... 35 ವರ್ಷಗಳಿಂದಲೂ ಈ ನಮ್ಮ ಜನ ನೀರಿಲ್ಲದೆ ಬವಣೆಪಡುತ್ತಿಲ್ಲವೆ ? ಅದೇನು ಈಗ ಮಾತ್ರ ಕೆಲವರಿಗೆ ಈ ದೃಷ್ಯ ಕಂಡುದುದು, ಇತ್ಯಾದಿ.... ಇತ್ಯಾದಿ.

ಕೊನೆಯ ಅನಿಸಿಕೆ: ತಿಂಗಳೊಂದಕ್ಕೆ 700 ರೂ. ಸಂಬಳ, 550 ರೂ. ಭತ್ಯೆ, ಅಧಿವೇಶನ ಇದ್ದಾಗ 51 ರೂ. ಭತ್ಯೆ, ಅಧಿವೇಶನದ ಹಿಂದಿನ ಹಾಗೂ ಮುಂದಿನ ದಿನ ಭತ್ಯೆ. ಮೊದಲ ದರ್ಜೆ ರೈಲ್ವೆ ಪ್ರಯಾಣದರದ ನಾಲ್ಕು ಪಾಲು ಭತ್ಯೆ, ವರ್ಷಕ್ಕೆ 2000 ರೂ. ರೈಲ್ವೆ ಪ್ರಯಾಣದ ಕೂಪನ್, ಶಾಸಕರು ಹಾಗೂ ಅವರ ಜೊತೆ ಮತ್ತೊಬ್ಬರು ರಾಜ್ಯದಲ್ಲಿ ಎಲ್ಲಿಬೇಕಾದರೂ ಉಚಿತ ಪ್ರಯಾಣ ಮಾಡುವ ಸೌಲಭ್ಯ, ಸುಸಜ್ಜಿತವಾದ ವಸತಿ ಗೃಹ, ಟೆಲಿಫೋನು, ಶಾಸಕರು ಕೇಳಿದ ಕಡೆ ಮತ್ತೊಂದು ಟೆಲಿಫೋನು, ರಿಯಾಯಿತಿ ದರದಲ್ಲಿ ಟ್ಯಾಕ್ಸಿ ಸೌಲಭ್ಯ...." ಕೋಟಿ ಕೋಟಿ ಬಡವರುಳ್ಳ ಈ ಭಾರತದಲ್ಲಿ ನಾನಿದ್ದೇನೊ, ಅಥವ ಇನ್ನೆಲ್ಲೊ ಗಂಧರ್ವಲೋಕದಲ್ಲಿದ್ದೇನೊ ಎಂದೆನಿಸಿತು....

ನನಗಂತೂ ನನ್ನ ಹಿಂದಿನ ಜೀವನಕ್ಕೂ ಈ ಹೊಸ ಜೀವನಕ್ಕೂ ಏನೇನೂ ಸಂಬಂಧವಿಲ್ಲದಂತೆ ಕಂಡಿತು....

ಬೇಗ ಬೇಗನೆ ದಿವಂತ ಕಾಂ। ಎ ಕೆ. ಗೋಪಾಲನ್ ಜೀವನ ಚರಿತ್ರೆಯ ಪುಸ್ತಕದ ಕೆಲವು ಪುಟಗಳನ್ನು ತಿರುವಿಹಾಕತೊಡಗಿದೆ.

○

ಕೇಂದ್ರೋದ್ಯಮ ನೌಕರರ ಮುಷ್ಕರ ಮುಂದೂಡಿಕೆ

ಜನವರಿ 28 ರಂದು ನಡೆಯಬೇಕಾಗಿದ್ದ ಕೇಂದ್ರೋದ್ಯಮ ನೌಕರರ ಒಂದು ದಿನದ ಮುಷ್ಕರವನ್ನು ಮುಂದೂಡಿರುವುದಾಗಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರ ಸಮಿತಿ ತಿಳಿಸಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಜನವರಿ 18 ರಂದು ಚರ್ಚೆಯಲ್ಲಿ ಭಾಗವಹಿಸಿದ್ದ ಕೇಂದ್ರ ಹಣಕಾಸು ಸಚಿವ ಶ್ರೀ ಪ್ರಣಬ್ ಮುಖರ್ಜಿ ಅವರು ತುಟ್ಟಿ ಭತ್ಯೆ ಹೆಚ್ಚಳಕ್ಕಾಗಿ ಸಮಿತಿಯೊಂದನ್ನು ನೇಮಿಸಬೇಕೆಂಬ ಸಲಹೆಯನ್ನು ಭಾರತ ಸರ್ಕಾರ ಅನುಮೋದಿಸಿದೆಯೆಂಬುದಾಗಿ ತಿಳಿಸಿದರು. ಸರ್ಕಾರವು ಸರ್ಕಾರೀ ಪ್ರತಿನಿಧಿಗಳು, ಕೇಂದ್ರೋದ್ಯಮಗಳ ಪ್ರತಿನಿಧಿಗಳು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳನ್ನೊಳಗೊಂಡ ಸಮಿತಿಯೊಂದನ್ನು ನೇಮಿಸುತ್ತದೆ. ಆ ಸಮಿತಿಯು ಇನ್ನು ಮೂರು ತಿಂಗಳೊಳಗಾಗಿ ತುಟ್ಟಿಭತ್ಯ ಹೆಚ್ಚಳದ ಕುರಿತು ತನ್ನ ಶಿಫಾರಸ್ಸಿನ ವರದಿಯನ್ನು ಮಂಡಿಸಲಿದೆ.

ಬಿ.ಪಿ.ಇ.ನ ಇತರ ಮಾರ್ಗದರ್ಶನಗಳ ಕುರಿತು ಕೇಂದ್ರ ಕಾರ್ಮಿಕ ಸಂಘಟನೆಗಳು ಬರಹ ಮೂಲಕ ನೀಡಿದ ಟೀಕೆಗೆ ಕೇಂದ್ರ ಅರ್ಥ ಸಚಿವರು ಅವುಗಳನ್ನು ಪುನರ್‌ಪರಿಶೀಲಿಸುವುದಾಗಿ ಒಪ್ಪಿದ್ದಾರೆ.

ತುಟ್ಟಿಭತ್ಯೆ ಹೆಚ್ಚಳಕ್ಕಾಗಿ ದೀರ್ಘಕಾಲದಿಂದ ಒತ್ತಾಯಿಸುತ್ತಿರುವ ಕೇಂದ್ರೋದ್ಯಮ ನೌಕರರ ಬೇಡಿಕೆಯನ್ನು ಈಡೇರಿಸಲು ಕೇಂದ್ರ ಸರ್ಕಾರ ಒಪ್ಪಿಕೊಂಡಿರುವುದು ಕೇಂದ್ರೋದ್ಯಮ ನೌಕರರ ಐಕ್ಯ ಚಳುವಳಿಯ ಒಂದು ಮಹತ್ವದ ಸಾಧನೆಯೆಂಬುದಾಗಿ ರಾಷ್ಟ್ರೀಯ ಪ್ರಚಾರ ಸಮಿತಿ ಪರಿಗಣಿಸಿದೆ. ಆದ್ದರಿಂದ ಜನವರಿ 28ರ ಮುಷ್ಕರವನ್ನು ಮುಂದೂಡಲು ತೀರ್ಮಾನಿಸಲಾಯಿತೆಂದು ಅದು ತಿಳಿಸಿದೆ.

○

ಕಮ್ಯೂನಿಸ್ಟ್ ಪಕ್ಷದ ಒತ್ತಾಯ

(2ನೇ ಪುಟದಿಂದ)

ಭೂ ಸುಧಾರಣಾ ಕಾನೂನಿ ಪ್ರಕಾರ ಭೂಮಿ ಹಕ್ಕು ಖಾಯಂ ಆದ ರೈತರಿಗೆ ಹಕ್ಕು ಪತ್ರಗಳನ್ನು ಕೂಡಲೆ ಕೊಡುವಂತೆ ಸರಕಾರವನ್ನು ಒತ್ತಾಯಿಸಲೂ ತೀರ್ಮಾನಿಸಲಾಯಿತು ಎಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ॥ ಕೆ. ಆರ್. ಶ್ರೀಯಾನರು ತಿಳಿಸಿದ್ದಾರೆ.

○

ಪರಿಸರ

○ ಶ್ರೀಮತಿ ಗಾಂಧಿಯವರೇ, ಒಂದು ಕಾಲಕ್ಕೆ ನೀವು ಕೂಡಾ ಭಿನ್ನಮತೀಯ ನಾಯಕರಾಗಿದ್ದಿರಿ ಎಂಬುದನ್ನು ನೀವು ಮರೆತಿದ್ದೀರಿ.

— ರತೂಭಾಯಿ ಅದಾನಿ ('ರಾಷ್ಟ್ರೀಯ ಕಾಂಗ್ರೆಸ್' ಸಂಸ್ಥಾಪಕ)

● 1977ರಲ್ಲಿ ನಡೆದ ಚುನಾವಣೆ— ತುರ್ತು ಪರಿಸ್ಥಿತಿ ಆಳ್ವಿಕೆಯನ್ನು ಜನತೆ ತಿರಸ್ಕರಿಸಿದ್ದರ ಸಂಕೇತವಾದರೆ, 1983ರ ಚುನಾವಣೆ ಈ ಅಂತುಳೆಗಳು ಗುಂಡೂರಾವ್‌ಗಳು ಮತ್ತು ಜಗನ್ನಾಥ ಮಿಶ್ರಾಗಳು ಪ್ರತಿನಿಧಿಸುವ ಇಡೀ "ಕಾಂಗ್ರೆಸ್ ಸಂಸ್ಕೃತಿ"ಯನ್ನೆ ! ಸಾರಾಸಗಟು ತಿರಸ್ಕರಿಸಿರುವುದರ ಸಂಕೇತ.

— ಹರೀಶ್ ಖರೆ (ಹಿಂದೂಸ್ತಾನ್ ಟೈಂಸ್‌ನಲ್ಲಿ)

○ 13 ರಾಜ್ಯಗಳಲ್ಲಿ ಶೇಕಡಾ 15 ರಿಂದ 100ರವರೆಗೆ ವಿದ್ಯುತ್ ಕಡಿತ ಜಾರಿಯಲ್ಲಿದ್ದರೂ ಈ ವರ್ಷದ ವಿದ್ಯುತ್ ಉತ್ಪಾದನೆಗೆ ನಿಗದಿಪಡಿಸಿದ್ದ ಗುರಿ 119 5 ಬಿಲಿಯ ಯೂನಿಟ್‌ಗಳನ್ನು ಮುಟ್ಟಲು ಮುನ್ನಡೆದಿದೆ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ಆದರೆ 1981ರ ಒಟ್ಟು ವಿದ್ಯುತ್ ಉತ್ಪಾದನೆ 1121.2 ಬಿಲಿಯ ಯೂನಿಟ್‌ಗಳು ಎಂದು ಗಣನೆಗೆ ತೆಗೆದುಕೊಂಡರೆ ಕೇಂದ್ರ ಸರ್ಕಾರ ವಿದ್ಯುತ್ ಕಡಿತದ ಗುರಿ ಇಟ್ಟುಕೊಂಡಂತೆ ಕಾಣುತ್ತದೆ.

— ಇಂಡಿಯನ್ ಎಕ್ಸ್‌ಪ್ರೆಸ್, ಜ. 15

○ ಚುನಾವಣೆಗಳು ನಡೆಯುತ್ತವೆ ಎಂದು ನಾನು ಯಾವಾಗಲೂ ಹೇಳುತ್ತೇನೆ.

— ಜಿಯಾ ಉಲ್ ಹಕ್ [ಪಾಕಿಸ್ತಾನದ ಅಧ್ಯಕ್ಷ]

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V Temple Street, Sultanpet, B-560 053. Phone-24154. Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO